ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ಮತ್ತು ವಿಜ್ಞಾನಗಳ ಸಂಸ್ಥೆ, ಹಾಸನ.
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN
Website: www.hims-hassan.org Phone/Fax No.08172-231699, 231599, Email:directorhims@yahoo.com

# 23ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳು

## ದಿನಾಂಕ: 06–03–2020ರಂದು ಶುಕ್ರವಾರ

## ಸಂಜೆ : 4.00 ಗಂಟೆಗೆ

## : ಸ್ಥಳ :

ಕೊಠಡಿ ಸಂಖ್ಯೆ: 601, 6ನೇ ಮಹಡಿ, 4ನೇ ಹಂತ,
ಬಹುಮಹಡಿ ಕಟ್ಟಡ, ಅಂಬೇಡ್ಕರ್ ವಿಧಿ, ಬೆಂಗಳೂರು

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN-573201
Website: www.hims-hassan.org Phone/Fax No.08172-231699 Email:directorhims@yahoo.com

ನಿರ್ದೇಶಕರ ಕಛೇರಿ ಹಿಮ್ಸ್ ಹಾಸನ

# 23ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳು

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 23ನೇ ಆರ್ಥಿಕ ಸಮಿತಿ ಸಭೆಯು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ ಸಭೆ, ಹಿಮ್ಸ್ ಹಾಸನ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:06-03-2020ರಂದು ಶುಕ್ರವಾರ ಸಂಜೆ:4.00ಗಂಟೆಗೆ ಕೊಠಡಿ ಸಂಖ್ಯೆ:601, 6ನೇ ಮಹಡಿ, 4ನೇ ಹಂತ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವಿಧಿ, ಬೆಂಗಳೂರು ಇಲ್ಲಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಒಟ್ಟು ಸದಸ್ಯರ ಸಂಖ್ಯೆ:10** **ಹಾಜರಿದ್ದ ಸದಸ್ಯರ ಸಂಖ್ಯೆ: 10**

| | | | |
|---|---|---|---|
| 1 | ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, 4ನೇ ಹಂತ, ಬೆಂಗಳೂರು. | ಅಧ್ಯಕ್ಷರು | ಹಾಜರಿರುತ್ತಾರೆ |
| 2 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 3 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 4 | ಮಾನ್ಯ ಸರ್ಕಾರದ ಉಪಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, 4ನೇ ಹಂತ, ಬೆಂಗಳೂರು | ಸದಸ್ಯರು | ಹಾಜರಿರುತ್ತಾರೆ |
| 5 | ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು | ಸದಸ್ಯರು | ಹಾಜರಿರುತ್ತಾರೆ |
| 6 | ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 7 | ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 8 | ಪ್ರಾಂಶುಪಾಲರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 9 | ವೈದ್ಯಕೀಯ ಅಧೀಕ್ಷಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 10 | ಆರ್ಥಿಕ ಸಲಹೆಗಾರರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿರುತ್ತಾರೆ |

ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ನಿರ್ದೇಶಕರ ಕಛೇರಿ ★ ಹಿಮ್ಸ್ ಹಾಸನ ★

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 1 | ದಿನಾಂಕ:22-11-2019ರಂದು ನಡೆದ 22ನೇ ಆರ್ಥಿಕ ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಓದಿ ಅಂಗೀಕರಿಸುವುದರ ಬಗ್ಗೆ. | ದಿನಾಂಕ:22-11-2019ರಂದು ನಡೆದ 22ನೇ ಆರ್ಥಿಕ ಸಮಿತಿ ಸಭೆಯಲ್ಲಿ 18 ವಿಷಯಗಳ ಬಗ್ಗೆ ಚರ್ಚಿಸಿ ತೆಗೆದುಕೊಂಡಿದ್ದ ತೀರ್ಮಾನಗಳನ್ವಯ ಸಂಸ್ಥೆಯಿಂದ ತೆಗೆದುಕೊಂಡಿರುವ ಕ್ರಮಗಳ ಅನುಪಾಲನಾ ವರದಿಯನ್ನು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು/ಆರ್ಥಿಕ ಸಲಹೆಗಾರರು(ಪ್ರಭಾರ) ಸಭೆಯ ಮುಂದೆ ಮಂಡಿಸಿದರು.<br>**ತೀರ್ಮಾನ:**<br>ಸದರಿ ಸಭೆಯ ಅನುಪಾಲನಾ ವರದಿಯನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 2 | 2019-20ನೇ ಸಾಲಿನಲ್ಲಿ ಹಿಮ್ಸ್ ಸಂಸ್ಥೆಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ ಮತ್ತು ವೆಚ್ಚಗಳ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ವಿಮರ್ಶೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸರ್ಕಾರದಿಂದ 2019-20ನೇ ಸಾಲಿಗೆ ಕೋರಲಾಗಿದ್ದ ಅನುದಾನ ಸರ್ಕಾರದಿಂದ ವಿವಿಧ ಲೆಕ್ಕ-ಶೀರ್ಷಿಕೆಯಡಿ ನಿಗದಿಯಾಗಿರುವ ಅನುದಾನ, ಸದರಿ ಅನುದಾನದಲ್ಲಿ ವೆಚ್ಚ ಮಾಡಲಾಗಿರುವ ವಿವರ ಮತ್ತು ಬ್ಯಾಂಕ್ ಖಾತೆಗಳಲ್ಲಿ ಲಭ್ಯವಿರುವ ಅನುದಾನದ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಪರಾಮರ್ಶಿಸಲಾಯಿತು.<br>**ತೀರ್ಮಾನ:**<br>ದಿನಾಂಕ:21-5-2018ರಂದು ನಡೆದ 19ನೇ ಆರ್ಥಿಕ ಸಮಿತಿ ಸಭೆಯಲ್ಲಿ ಚರ್ಚಿಸಿ ತೆಗೆದುಕೊಂಡ ತೀರ್ಮಾನದಂತೆ ಅತಿ ಅವಶ್ಯಕವಿರುವ ಬಿಲ್‌ಗಳನ್ನು ಆಸ್ಪತ್ರೆಯ ಯೂಸರ್ಸ್ ನಿಧಿಯಿಂದ ಪಾವತಿಸುತ್ತಿರುವುದನ್ನು ಹಾಗೂ ಸರ್ಕಾರದಿಂದ ಅನುದಾನ ಬಿಡುಗಡೆಯಾದ ನಂತರ ಮರು ಹೊಂದಾಣಿಕೆ ಮಾಡಿಕೊಳ್ಳುವ ಕ್ರಮವನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 3 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2018-19ನೇ ಸಾಲಿನ ಲೆಕ್ಕ-ಪರಿಶೋಧನೆಯನ್ನು ಶ್ರೀ.ಹೆಚ್.ಡಿ. ಅಭಿನಂದನ್, ಚಾರ್ಟರ್ಡ್ ಅಕೌಂಟೆಂಟ್, ಹಾಸನ ಇವರು ಪೂರ್ಣಗೊಳಿಸಿ ಸಲ್ಲಿಸಿದ್ದು | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಬೋಧಕ ಆಸ್ಪತ್ರೆ, ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯ, ಹಾಸನ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಹೊಳೆನರಸೀಪುರ ಮತ್ತು ವಿದ್ಯಾರ್ಥಿ ವಸತಿ ನಿಲಯಗಳ 2018-19ನೇ ಸಾಲಿನ ಲೆಕ್ಕ-ಪರಿಶೋಧನೆಯನ್ನು ಸಂಸ್ಥೆಯಿಂದ ನೇಮಕಮಾಡಿರುವ ಶ್ರೀ.ಹೆಚ್.ಡಿ. ಅಭಿನಂದನ್, ಚಾರ್ಟರ್ಡ್ ಅಕೌಂಟೆಂಟ್, ಹಾಸನ ಇವರು ಪೂರ್ಣಗೊಳಿಸಿ ಲೆಕ್ಕ-ಪರಿಶೋಧನಾ ವರದಿ ಸಲ್ಲಿಸಿರುವುದನ್ನು ಮುಖ್ಯ ಆಡಳಿತಾಧಿಕಾರಿಗಳು /ಆರ್ಥಿಕ ಸಲಹೆಗಾರರು(ಪ್ರಭಾರ) ಸಭೆಯ ಮುಂದೆ ಮಂಡಿಸಿದರು.<br>**ತೀರ್ಮಾನ:**<br>ಸಂಸ್ಥೆಯ ಅಂತರಿಕ ಲೆಕ್ಕ ಪರಿಶೋಧಕರು ಸಲ್ಲಿಸಿದ್ದ 2018-19ನೇ ಸಾಲಿನ ಪರಿಶೋಧನಾ ಆಡಿಟ್ ವರದಿಯನ್ನು ಸಭೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಸರ್ಕಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ಸದರಿ ಆಡಿಟ್ ವರದಿಯನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ. | |
| 4 | ಕೇಂದ್ರ ಸರ್ಕಾರದಿಂದ ಬಿಡುಗಡೆ ಯಾಗಲಿರುವ ಅನುದಾನದಲ್ಲಿ ಹಿಮ್ಸ್ ಸಂಸ್ಥೆಯಲ್ಲಿ ಹೊಸದಾಗಿ ಪಿ.ಜಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಮತ್ತು ಈಗಾಗಲೇ ಪ್ರಾರಂಭಿಸಲಾಗಿರುವ ಸೀಟುಗಳನ್ನು ಹೆಚ್ಚಿಸಲು ಅಗತ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ಅವಶ್ಯಕ ಕಾಮಗಾರಿಗಳನ್ನು ನಿಯಮಾನುಸಾರ ಕೈಗೊಳ್ಳುವ ಬಗ್ಗೆ. | ಸಂಸ್ಥೆಯಲ್ಲಿ ಹೊಸದಾಗಿ ಪಿ.ಜಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಮತ್ತು ಈಗಾಗಲೇ ಪ್ರಾರಂಭಿಸಲಾಗಿರುವ ಸೀಟುಗಳನ್ನು ಹೆಚ್ಚಿಸಲು ಅವಶ್ಯಕವಿರುವ ಮೂಲಭೂತ ಸೌಕರ್ಯಗಳನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರಕ್ಕೆ ರೂ 62.86 ಕೋಟಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿ ಕೇಂದ್ರ ಸರ್ಕಾರವು ಪತ್ರ ಸಂಖ್ಯೆ: U.14017/11/2019-ME-II, ದಿನಾಂಕ: 15-11-2019ರ ಆದೇಶದಲ್ಲಿ ಸ್ನಾತಕೋತ್ತರ ಪದವಿ ಪ್ರಾರಂಭಿಸಿರುವುದಕ್ಕೆ ಮತ್ತು ಸ್ನಾತಕೋತ್ತರ ಪದವಿಗಳ ಸೀಟುಗಳನ್ನು ಹೆಚ್ಚಿಸುವ ಸಂಖ್ಯೆಗೆ ಅನುಗುಣವಾಗಿ ರೂ.58.22 ಕೋಟಿಗಳನ್ನು ಈ ಕೆಳಕಂಡಂತೆ ಹಂಚಿಕೆ ಮಾಡಿರುತ್ತದೆ. |

**PG Seats to be started:**

| Sl No | Name of PG Course | No of Seats proposed to be Started | Total Cost by EC (Rs in crore) |
|---|---|---|---|
| 01 | MD General Medicine | 11 | 9.153 |
| 02 | MD General Surgery | 11 | 9.8388 |
| 03 | MS Obstetrics and Gynecology | 08 | 7.008 |
| 04 | MD Pediatrics | 08 | 7.458 |
| 05 | MD Anesthesiology | 06 | 7.2 |
| 06 | MS Orthopedics | 08 | 7.242546 |
| 07 | MD Psychiatry | 04 | 3.1208 |
| 08 | MD Respiratory Medicine | 03 | 2.399 |
| | **Total** | **59** | **53.42015** |

**02. PG Seats To Increase :**



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|

| Sl No | Name of PG Course | No of Seats proposed to be Started | Total Cost (Rs in crore) |
|---|---|---|---|
| 01 | MS Ophthalmology | 2 to 4 | 2.40 |
| 02 | MS Otorhinolaryngology | 2 to 4 | 2.40 |
| | **Total** | **04** | **4.80** |

**Grand Total (01+02) of Rs .58.22**

ಮುಂದುವರೆದು ಕೇಂದ್ರ ಸರ್ಕಾರವು ಕಾಮಗಾರಿಗಳ ನಿರ್ಮಾಣಕ್ಕೆ ರೂ.46.20 ಕೋಟಿ ಹಾಗೂ ಉಪಕರಣಗಳ ಖರೀದಿಗೆ ರೂ.12.02 ಕೋಟಿ ಸೇರಿದಂತೆ ಒಟ್ಟು ರೂ.58.22 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ರೂ.16.00 ಕೋಟಿ ಅನುದಾನವನ್ನು ರಾಜ್ಯ ಸರ್ಕಾರಕ್ಕೆ ಪತ್ರ ಸಂಖ್ಯೆ: U.14017/15/2019-ME-II, ದಿನಾಂಕ:25-11-2019 ರಲ್ಲಿ ಬಿಡುಗಡೆ ಮಾಡಿರುತ್ತದೆ. ಈ ಸಂಬಂಧ ದಿನಾಂಕ:12.01.2020ರಲ್ಲಿ ರಾಜ್ಯ ಸರ್ಕಾರ ಮತ್ತು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಭಾರತ ಸರ್ಕಾರದೊಂದಿಗೆ MOU ಮಾಡಿಕೊಳ್ಳಲಾಗಿರುತ್ತದೆ.

ಸ್ನಾತಕೋತ್ತರ ವಿಭಾಗಗಳಿಗೆ ವಿಭಾಗದ ಮುಖ್ಯಸ್ಥರುಗಳು ಸಲ್ಲಿಸಿರುವ ಬೇಡಿಕೆಪಟ್ಟಿಗೆ ಅನುಗುಣವಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದಲ್ಲಿ ರೂ.12.00 ಕೋಟಿ ವೆಚ್ಚದಲ್ಲಿ ಅವಶ್ಯಕ ಉಪಕರಣಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಟೆಂಡರ್ ಕರೆಯಬೇಕಾಗಿರುತ್ತದೆ ಆದರೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದ್ದ ಉಪಕರಣಗಳ ಬೇಡಿಕೆ ಪಟ್ಟಿಯಲ್ಲಿ ಸುಮಾರು ರೂ.35.00 ಲಕ್ಷಗಳ ವೆಚ್ಚದಲ್ಲಿ ಅರ್ಥೋರ್ಸ್ಕೋಪಿ ಉಪಕರಣವನ್ನು ಖರೀದಿಸಿರುವುದರಿಂದ ಸದರಿ ವೆಚ್ಚಕ್ಕೆ ಸಮನಾಂತರವಾಗಿ ಕೀಲು ಮತ್ತು ಮೂಳೆ ಚಿಕಿತ್ಸಾ ವಿಭಾಗಕ್ಕೆ ಫ್ಯಾಕ್ಚರ್ ಟೇಬಲ್ –02 ಹಾಗೂ ಸಿ.ಆರ್ಮ್ ಉಪಕರಣ –01, ಖರೀದಿಸಲು ಮತ್ತು ಅವಶ್ಯಕ ಕಾಮಗಾರಿಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲು ಯಾವ ಇಲಾಖೆಗೆ ವಹಿಸಬೇಕೆಂಬುದರ ವಿಷಯವನ್ನು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು /ಆರ್ಥಿಕ ಸಲಹೆಗಾರರು (ಪ್ರಭಾರ) ಸಭೆಯ ಮುಂದೆ ಮಂಡಿಸಿದರು.

**ತೀರ್ಮಾನ:**



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಂಸ್ಥೆಯಲ್ಲಿ ಹೊಸದಾಗಿ ಪಿ.ಜಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಮತ್ತು ಈಗಾಗಲೇ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಪ್ರಾರಂಭಿಸಲಾಗಿರುವ ವಿಭಾಗಗಳಲ್ಲಿ ಸೀಟುಗಳನ್ನು ಹೆಚ್ಚಿಸಲು ಅವಶ್ಯಕವಿರುವ ಮೂಲಭೂತ ಸೌಕರ್ಯಗಳನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ರೂ.58.22 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುವುದಕ್ಕೆ ಅನುಗುಣವಾಗಿ Action Plan ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿ ಸರ್ಕಾರದಿಂದ ಆದೇಶ ಹೊರಡಿಸಿದ ನಂತರ ಅಗತ್ಯ ಕ್ರಮ ಕೈಗೊಳ್ಳುವುದೆಂದು ಹಾಗೂ ಕೇಂದ್ರ ಸರ್ಕಾರಕ್ಕೆ ಉಪಕರಣಗಳ ಖರೀದಿಗಾಗಿ ಸಲ್ಲಿಸಿದ್ದ ಪಟ್ಟಿಯಲ್ಲಿ ರೂ.28.00 ಲಕ್ಷಗಳ ವೆಚ್ಚದಲ್ಲಿ ಅರ್ಥೋಸ್ಕೋಪಿ ಉಪಕರಣವನ್ನು ಈಗಾಗಲೇ ಖರೀದಿಸಿರುವುದರಿಂದ ಸದರಿ ವೆಚ್ಚಕ್ಕೆ ಸಮನಾಂತರವಾಗಿ ಕೀಲು ಮತ್ತು ಮೂಳೆ ಚಿಕಿತ್ಸಾ ವಿಭಾಗಕ್ಕೆ ಫ್ಯಾಕ್ಚರ್‌ಟೇಬಲ್-02 ಹಾಗೂ ಸಿ.ಆರ್ಮ್ ಉಪಕರಣ-01, ವನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಖರೀದಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 5 | ಸಂಸ್ಥೆಯ ಬೋಧಕ ಆಸ್ಪತ್ರೆ ಮತ್ತು ಕಾಲೇಜು ವಿಭಾಗಗಳಿಗೆ ಅಗತ್ಯವಿರುವ ಮುದ್ರಣ ಸಾಮಗ್ರಿಗಳನ್ನು ಸರಬರಾಜು ಪಡೆಯಲು 2020-21ನೇ ಸಾಲಿಗೆ ಒಂದು ವರ್ಷದ ಅವಧಿಗೆ ಇ-ಟೆಂಡರ್ ಕರೆಯುವ ಬಗ್ಗೆ. | ಸಂಸ್ಥೆಯ ಬೋಧಕ ಆಸ್ಪತ್ರೆ ಮತ್ತು ಕಾಲೇಜು ವಿಭಾಗಗಳಿಗೆ ಅಗತ್ಯವಿರುವ ಕಛೇರಿ ಫೈಲ್‌ಗಳು, ಇಂಡೆಂಟ್ ಪುಸ್ತಕ, ಸ್ಟೂಡೆಂಟ್ಸ್ ರೆಕಾರ್ಡ್, ವೈದ್ಯಕೀಯ ಪ್ರಮಾಣ ಪತ್ರಗಳು, ಕೇಸ್‌ಶೀಟ್ಸ್, ರಿಪೋರ್ಟ್ ಪ್ಯಾಡ್ಸ್, ಹಾಗೂ ಇತರೆ ಮುದ್ರಣ ಸಾಮಗ್ರಿಗಳನ್ನು ಸರಬರಾಜು ಪಡೆಯಲು 2019-20ನೇ ಸಾಲಿನಲ್ಲಿ ಕೆಟಿಪಿಪಿ ನಿಯಮಾನುಸಾರ ರೂ.11.35ಲಕ್ಷಗಳ ವೆಚ್ಚದಲ್ಲಿ ಕರೆಯಲಾಗಿದ್ದ ಒಂದು ವರ್ಷದ ಇ-ಟೆಂಡರ್ ಅವಧಿಯು 31-7-2020ಕ್ಕೆ ಮುಕ್ತಾಯಗೊಳ್ಳುತ್ತಿದ್ದು, ಸಂಸ್ಥೆಯ ಬೋಧಕ ಆಸ್ಪತ್ರೆ ಮತ್ತು ಕಾಲೇಜಿನ ವಿವಿಧ ವಿಭಾಗಗಳಿಗೆ 2020-21ನೇ ಸಾಲಿಗೆ ಒಂದು ವರ್ಷದ ಅವಧಿಗೆ ಅಗತ್ಯವಿರುವ ಮುದ್ರಣ ಸಾಮಗ್ರಿಗಳ ಸರಬರಾಜಿಗೆ ವಿವಿಧ ವಿಭಾಗದ ಮುಖ್ಯಸ್ಥರುಗಳು ಅಂದಾಜು ರೂ.13.00 ಲಕ್ಷಗಳಿಗೆ ಬೇಡಿಕೆ ಪಟ್ಟಿ ಸಲ್ಲಿಸಿರುತ್ತಾರೆ. ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆ ಅಧಿಕವಾಗಿರುವುದು, ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರವೇಶಾತಿ ಹೆಚ್ಚಳ, ಕಾಯಕಲ್ಪ, ಎನ್.ಕ್ಯೂ.ಎ.ಎಸ್, ಎನ್.ಇ.ಬಿ.ಹೆಚ್, ಇ-ಆಸ್ಪತ್ರೆ, ನಿರ್ವಹಣೆ ಇರುವುದರಿಂದ ಮುದ್ರಣ ಸಾಮಗ್ರಿಗಳ ಪ್ರಮಾಣ ಮತ್ತು ವೆಚ್ಚ ಹೆಚ್ಚಳವಾಗಿರುತ್ತದೆ ಎಂದು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು /ಆರ್ಥಿಕ ಸಲಹೆಗಾರರು(ಪ್ರಭಾರ) ಸಭೆಯ ಮುಂದೆ ಮಂಡಿಸಿದರು.<br>**<u>ತೀರ್ಮಾನ:</u>** |



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಸದರಿ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ ವಿವಿಧ ವಿಭಾಗಗಳಿಗೆ ಅಗತ್ಯವಿರುವ ಮುದ್ರಣ ಸಾಮಗ್ರಿಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ 2020-21ನೇ ಸಾಲಿಗೆ ಒಂದು ವರ್ಷದ ಅವಧಿಗೆ ಇ-ಟೆಂಡರ್ ಕರೆಯುವುದೆಂದು ಸದರಿ ವೆಚ್ಚವನ್ನು ಸರ್ಕಾರದಿಂದ ಸಂಸ್ಥೆಗೆ ಬಿಡುಗಡೆಯಾಗುವ ಲೆಕ್ಕ ಶೀರ್ಷಿಕೆ 2210(103) ಅಡಿಯಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 6 | ಸಂಸ್ಥೆಯ ಕಾಲೇಜು ವಿಭಾಗ, ಬೋಧಕ ಆಸ್ಪತ್ರೆ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಹಾಸನ ಹಾಗೂ ವಿಆರ್.ಡಿ.ಎಲ್ ವಿಭಾಗಕ್ಕೆ ಅಗತ್ಯವಿರುವ ಸ್ಟೇಷನರಿ ಸಾಮಗ್ರಿಗಳನ್ನು ಸರಬರಾಜು ಪಡೆಯಲು 2020-21ನೇ ಸಾಲಿಗೆ ಒಂದು ವರ್ಷದ ಅವಧಿಗೆ ಇ-ಟೆಂಡರ್ ಕರೆಯುವ ಬಗ್ಗೆ. | ಸಂಸ್ಥೆಯ ಬೋಧಕ ಆಸ್ಪತ್ರೆ ಮತ್ತು ಕಾಲೇಜು, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಹಾಸನ ವಿಭಾಗಗಳಿಗೆ ಅಗತ್ಯವಿರುವ ಸ್ಟೇಷನರಿ ಸಾಮಗ್ರಿಗಳ ಸರಬರಾಜು ಪಡೆಯಲು 2019-20ನೇ ಸಾಲಿನಲ್ಲಿ ಕೆಟಿಪಿಪಿ ನಿಯಮಾನುಸಾರ ರೂ.16.00ಲಕ್ಷಗಳ ವೆಚ್ಚದಲ್ಲಿ ಕರೆಯಲಾಗಿದ್ದ ಒಂದು ವರ್ಷದ ಇ-ಟೆಂಡರ್ ಅವಧಿಯು 31-7-2020ಕ್ಕೆ ಮುಕ್ತಾಯಗೊಳ್ಳುತ್ತಿದ್ದು, ಸಂಸ್ಥೆಯ ಬೋಧಕ ಆಸ್ಪತ್ರೆ ಮತ್ತು ಕಾಲೇಜಿನ ವಿವಿಧ ವಿಭಾಗಗಳಿಗೆ 2020-21ನೇ ಸಾಲಿಗೆ ಒಂದು ವರ್ಷದ ಅವಧಿಗೆ ಅಗತ್ಯವಿರುವ ಸ್ಟೇಷನರಿ ಸಾಮಗ್ರಿಗಳ ಸರಬರಾಜಿಗೆ ವಿವಿಧ ವಿಭಾಗದ ಮುಖ್ಯಸ್ಥರುಗಳು ಅಂದಾಜು ರೂ.16.00 ಲಕ್ಷಗಳಿಗೆ ಬೇಡಿಕೆ ಪಟ್ಟಿ ಸಲ್ಲಿಸಿರುತ್ತಾರೆ. ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆ ಅಧಿಕವಾಗಿರುವುದು, ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರವೇಶಾತಿ ಹೆಚ್ಚಳ, ಕಾಯಕಲ್ಪ, ಎನ್.ಕ್ಯೂ.ಎ.ಎಸ್, ಎನ್.ಇ.ಬಿ.ಹೆಚ್, ಇ-ಆಸ್ಪತ್ರೆ, ನಿರ್ವಹಣೆ ಇರುವುದರಿಂದ ಸ್ಟೇಷನರಿ ಸಾಮಗ್ರಿಗಳ ಪ್ರಮಾಣ ಮತ್ತು ವೆಚ್ಚ ಹೆಚ್ಚಳವಾಗಿರುತ್ತದೆಂದು ಮತ್ತು ಸಂಸ್ಥೆಯ ವಿಆರ್‌ಡಿಎಲ್ ವಿಭಾಗಕ್ಕೆ 2020-21ನೇ ರೂ.50.00ಸಾವಿರಗಳ ಅಂದಾಜಿನಲ್ಲಿ ಸ್ಟೇಷನರಿ ಸಾಮಗ್ರಿಗಳನ್ನು ಒದಗಿಸಿಕೊಡುವಂತೆ ವಿಭಾಗದ ಮುಖ್ಯಸ್ಥರು ಮನವಿ ಸಲ್ಲಿಸಿರುವುದನ್ನು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು /ಆರ್ಥಿಕ ಸಲಹೆಗಾರರು(ಪ್ರಭಾರ) ಸಭೆಯ ಮುಂದೆ ಮಂಡಿಸಿದರು.<br>**<u>ತೀರ್ಮಾನ:</u>**<br>ಸದರಿ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ ವಿವಿಧ ವಿಭಾಗಗಳಿಗೆ ಅಗತ್ಯವಿರುವ ಸ್ಟೇಷನರಿ ಸಾಮಗ್ರಿಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ 2020-21ನೇ ಸಾಲಿಗೆ ಒಂದು ವರ್ಷದ ಅವಧಿಗೆ ಇ-ಟೆಂಡರ್ ಕರೆಯುವುದೆಂದು ಸದರಿ ವೆಚ್ಚವನ್ನು ಸರ್ಕಾರದಿಂದ ಸಂಸ್ಥೆಗೆ ಬಿಡುಗಡೆಯಾಗುವ ಲೆಕ್ಕ ಶೀರ್ಷಿಕೆ 2210(103) ಅಡಿಯಲ್ಲಿ ಹಾಗೂ ಕೇಂದ್ರ ಸರ್ಕಾರದಿಂದ ವಿ.ಆರ್.ಡಿ.ಎಲ್. ಯೋಜನೆಯಡಿ ಬಿಡುಗಡೆಯಾಗುವ ಅನುದಾನದಲ್ಲಿ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 7 | ಸಂಸ್ಥೆಯ ಅರವಳಿಕೆ ಚಿಕಿತ್ಸಾ | ಸಂಸ್ಥೆಯ ಬೋಧಕ ಆಸ್ಪತ್ರೆಯ ಅರವಳಿಕೆ ಚಿಕಿತ್ಸಾ ವಿಭಾಗದ ಮುಖ್ಯಸ್ಥರು, ಐ.ಸಿ.ಯು ವಿಭಾಗದಲ್ಲಿ ದಾಖಲಾಗುವ |



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ವಿಭಾಗಕ್ಕೆ 10 ICU Cots ಗಳ ಸರಬರಾಜಿಗೆ ಇ-ಟೆಂಡರ್ ಕರೆಯುವ ಬಗ್ಗೆ. | ರೋಗಿಗಳ ಚಿಕಿತ್ಸೆ ಅನುಕೂಲವಾಗುವಂತೆ 10 ICU Cots ಗಳನ್ನು ಸರಬರಾಜು ಮಾಡಿಕೊಡಬೇಕೆಂದು ಮನವಿ ಸಲ್ಲಿಸಿರುವುದನ್ನು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು /ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು ವಿವರ ಈ ಕೆಳಕಂಡಂತೆ ಇರುತ್ತದೆ. |

| ಕ್ರ ಸಂ | ವಿವರ | ಪ್ರಮಾಣ | ಅಂದಾಜು ದರ (ರೂ. ಲಕ್ಷಗಳಲ್ಲಿ) | ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|---|
| 01 | ICU Cots | 10 | 35,000.00 | 3,50,000.00 |
| | Total | | | 3,50,000.00 |

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಐ.ಸಿ.ಯು ವಿಭಾಗಕ್ಕೆ ರೋಗಿಗಳ ಚಿಕಿತ್ಸೆಗಾಗಿ ಅಗತ್ಯವಿರುವ 10 ಐ.ಸಿ.ಯು. ಕಾಟ್‌ಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಮೂಲಕ ಖರೀದಿಸುವುದೆಂದು ಹಾಗೂ ಸದರಿ ವೆಚ್ಚವನ್ನು ಸಂಸ್ಥೆಯ ಬೋಧಕ ಆಸ್ಪತ್ರೆಯ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 8 | ಸಂಸ್ಥೆಯ ಹೊಸ ಬೋಧಕ ಆಸ್ಪತ್ರೆ ಕಟ್ಟಡ ಮತ್ತು ಕಾಲೇಜು ಕಟ್ಟಡದ ನೆಲಮಳಿಗೆಯಲ್ಲಿರುವ ಉಪಹಾರ ಮಂದಿರಗಳನ್ನು 2020-21 ರಿಂದ 2022-23ನೇ ಸಾಲಿಗೆ ಮೂರು ವರ್ಷದ ಅವಧಿಗೆ ಬಾಡಿಗೆ ನೀಡಲು ಇ-ಟೆಂಡರ್ ಕರೆಯುವ ಬಗ್ಗೆ. | ಸಂಸ್ಥೆಯ ಹೊಸ ಬೋಧಕ ಆಸ್ಪತ್ರೆ ಕಟ್ಟಡದ ನೆಲಮಳಿಗೆಯಲ್ಲಿರುವ ಉಪಹಾರ ಮಂದಿರವನ್ನು ನಡೆಸಲು 2017-18ನೇ ಸಾಲಿನಲ್ಲಿ ಮೂರು ವರ್ಷದ ಅವಧಿಗೆ ರೂ.16,200/-(ರೂ. ಹದಿನಾರು ಸಾವಿರದ ಇನ್ನೂರು ಮಾತ್ರ) ಬಾಡಿಗೆ ನಿಗದಿಪಡಿಸಿ ನೀಡಲಾಗಿದ್ದ ಉಪಹಾರ ಮಂದಿರದ ಬಾಡಿಗೆ ಕರಾರಿನ ಅವಧಿಯು ದಿನಾಂಕ:31.08.2020 ರಂದು ಹಾಗೂ ಕಾಲೇಜು ಕಟ್ಟದ ನೆಲಮಳಿಗೆಯಲ್ಲಿರುವ ಉಪಹಾರ ಮಂದಿರವನ್ನು ನಡೆಸಲು 2017-18ನೇ ಸಾಲಿನಲ್ಲಿ ಮೂರು ವರ್ಷದ ಅವಧಿಗೆ ರೂ.9,500/-(ರೂ. ಒಂಭತ್ತು ಸಾವಿರದ ಐದು ನೂರು ಮಾತ್ರ) ಬಾಡಿಗೆ ನಿಗದಿಪಡಿಸಿ ನೀಡಲಾಗಿದ್ದ ಉಪಹಾರ ಮಂದಿರದ ಬಾಡಿಗೆ ಕರಾರಿನ ಅವಧಿಯು ದಿನಾಂಕ:10.07.2020 ರಂದು ಮುಕ್ತಾಯವಾಗಲಿದ್ದು ಸಾರ್ವಜನಿಕರು, ರೋಗಿಗಳು, ಸಿಬ್ಬಂದಿಗಳು, ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಹೊಸ ಬೋಧಕ ಆಸ್ಪತ್ರೆ ಕಟ್ಟಡ ಮತ್ತು ಕಾಲೇಜು ಕಟ್ಟಡದ ನೆಲಮಳಿಗೆಯಲ್ಲಿರುವ ಉಪಹಾರ ಮಂದಿರಗಳನ್ನು 2020-21 ರಿಂದ 2022-23ನೇ ಸಾಲಿಗೆ ಮೂರು ವರ್ಷದ ಅವಧಿಗೆ ಬಾಡಿಗೆ ನೀಡಲು ಇ-ಟೆಂಡರ್ ಕರೆಯುವ ವಿಷಯವನ್ನು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು/ಆರ್ಥಿಕ ಸಲಹೆಗಾರರು(ಪ್ರಭಾರ) ಸಭೆಯ ಮುಂದೆ ಮಂಡಿಸಿದರು. |



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | **ತೀರ್ಮಾನ:**<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ 2 ಉಪಹಾರ ಮಂದಿರಗಳ ಬಾಡಿಗೆಯನ್ನು ಲೋಕೋಪಯೋಗಿ ಇಲಾಖೆಯಿಂದ ನಿಗದಿ ಪಡಿಸಿಕೊಂಡು ನಂತರ 2020-21 ರಿಂದ 2022-23ನೇ ಸಾಲಿಗೆ ಮೂರು ವರ್ಷದ ಅವಧಿಗೆ ಬಾಡಿಗೆ ನೀಡಲು ಇ-ಟೆಂಡರ್ ಕರೆಯುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 09 | ರೇಡಿಯೋಥೆರಾಪಿ ವಿಭಾಗದ ಕೊಬಾಲ್ಟ್ 60 (ಬಾಬಾಟ್ರಾನ್-II) ಉಪಕರಣದ ಸಿ.ಎಂ.ಸಿ ವಾರ್ಷಿಕ ನಿರ್ವಹಣೆಯ ಬಗ್ಗೆ. | ಸಂಸ್ಥೆಯ ರೇಡಿಯೋಥೆರಪಿ ವಿಭಾಗಕ್ಕೆ Cobalt Telethearaphy unit Bhabha Tron –II ಉಪಕರಣವನ್ನು ಮೂಲ ಸರಬರಾಜು ಸಂಸ್ಥೆಯಾದ M/S Panacea medical technologies pvt., ltdರವರಿಂದ ದಿನಾಂಕ:29.06.2013 ಸಾಲಿನಲ್ಲಿ ರೂ.1,59,20,762.00 ವೆಚ್ಚದಲ್ಲಿ ಖರೀದಿಸಿ ಅಳವಡಿಸಿ ನಂತರ ಸದರಿ ಉಪಕರಣವನ್ನು M/S. Panacea medical technologies pvt.ltd ರವರಿಗೆ ಮೂರು ವರ್ಷಗಳ ಅವಧಿಗೆ ಎ.ಎಂ.ಸಿ ವಾರ್ಷಿಕ ನಿರ್ವಹಣೆ ವೆಚ್ಚ ರೂ.17,15,544.00(ತೆರಿಗೆ ಸೇರಿ 18%)ಗಳನ್ನು 4210 ಲೆಕ್ಕಶೀರ್ಷಿಕೆಯಡಿ ಪಾವತಿಸಲಾಗಿರುತ್ತದೆ. ಸದರಿ ಉಪಕರಣದ ವಾರ್ಷಿಕ ನಿರ್ವಹಣಾ ಅವಧಿಯು ದಿನಾಂಕ:22-8-2020ಕ್ಕೆ ಮುಕ್ತಾಯವಾಗುವುದರಿಂದ ಸದರಿ ಕೊಬಾಲ್ಟ್ 60 (ಬಾಬಾಟ್ರಾನ್-II) ಉಪಕರಣವನ್ನು ಮುಂದಿನ ಒಂದು ವರ್ಷದ ಅವಧಿಗೆ ಎ.ಎಮ್.ಸಿ. ಬದಲಿಗೆ ಸಿ.ಎಮ್.ಸಿ. ನೀಡಲು ವಾರ್ಷಿಕ ನಿರ್ವಹಣೆ ಅಂದಾಜು ವೆಚ್ಚ ರೂ.16,47,166.00 ಗಳಾಗುವ ವಿಚಾರವನ್ನು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು /ಆರ್ಥಿಕ ಸಲಹೆಗಾರರು(ಪ್ರಭಾರ) ಸಭೆಯ ಮುಂದೆ ಮಂಡಿಸಿದರು.<br>**ತೀರ್ಮಾನ:**<br>ಸದರಿ ವಿಷಯದ ಬಗ್ಗೆ ಚರ್ಚಿಸಿ ಕೊಬಾಲ್ಟ್ 60 (ಬಾಬಾಟ್ರಾನ್-II) ಉಪಕರಣವು ಹಳೆಯದಾಗಿರುವುದರಿಂದ ಸದರಿ ಕಂಪನಿಯವರು ಸಿ.ಎಮ್.ಸಿ.ಗೆ ಒಪ್ಪದೆ ಇರುವ ಸಂಭವ ಇರುವುದರಿಂದ ಸಂಬಂಧಿತ ಕಂಪನಿಯವರೊಂದಿಗೆ ಚರ್ಚಿಸಿ ಸಿ.ಎಮ್.ಸಿ. ಮಾಡಲು ಒಪ್ಪಿದ್ದಲ್ಲಿ ಸಲ್ಲಿಸಿರುವ ಅಂದಾಜು ಪಟ್ಟಿಯಂತೆ ಸಿ.ಎಮ್.ಸಿ. ನೀಡುವುದೆಂದು ಒಪ್ಪದೆ ಇದ್ದಲ್ಲಿ ಎ.ಮ್.ಸಿ. ನೀಡುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 10 | ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಅವಶ್ಯವಿರುವ | ಹಾಸನ ಜಿಲ್ಲೆಯಲ್ಲಿ ಒಟ್ಟು 45 ಕುಟುಂಬಗಳು ಹಿಮೋಫೀಲಿಯಾ ತೊಂದರೆಯಿಂದ ಬಳಲುತ್ತಿದ್ದು, ಹಿಮೋಫೀಲಿಯ ರೋಗಿಗಳಿಗೆ Ultra Pure Recombinant Factor VIII ಔಷಧಿಯು ಹಿಮೋಫೀಲಿಯ ಸೊಸೈಟಿಯಲ್ಲಿ |



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಕ್ರಮ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td>Ultra Pure Recombinant Factor VIII Hemophilia ಇಂಜೆಕ್ಷನ್‌ನ್ನು ಸರಬರಾಜು ಪಡೆಯಲು ಆರ್ಥಿಕ ಸಮಿತಿ ಸಭೆಯ ಘಟನ್ನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಕೆ.ಟಿ.ಪಿ.ಪಿ ನಿಯಮಾನುಸಾರ ಅಲ್ಪಾವಧಿ ಇ-ಟೆಂಡರ್ ಕರೆದಿರುವುದನ್ನು ಅನುಮೋದಿಸುವ ಬಗ್ಗೆ.</td><td>ಲಭ್ಯವಿಲ್ಲದಿರುವುದರಿಂದ ಹಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ದೊರಕಿಸಿಕೊಡಬೇಕೆಂದು ಡಾ.ಪಾಲಾಕ್ಷ ಹೆಚ್.ಕೆ ಕಾರ್ಯದರ್ಶಿ, ಹಿಮೋಫೀಲಿಯ ಸೊಸೈಟಿ, ಹಾಸನ ಇವರು ಮನವಿ ಸಲ್ಲಿಸಿರುತ್ತಾರೆ. ಈ ಹಿಂದೆ ಹಿಮ್ಸ್ ಬೋಧಕ ಆಸ್ಪತ್ರೆಯಲ್ಲಿ Ultra Pure Recombinant Factor VIII ಔಷಧಿಯನ್ನು ಹಿಮೋಫೀಲಿಯ ಸೊಸೈಟಿ, ಬೆಂಗಳೂರಿನಿಂದ ಉಚಿತವಾಗಿ ಸರಬರಾಜು ಪಡೆದು ಚಿಕಿತ್ಸೆ ನೀಡಲಾಗುತ್ತಿದ್ದು, ಆದರೆ ಪ್ರಸ್ತುತ ಮೇಲ್ಕಂಡ ಸಂಸ್ಥೆಯಲ್ಲಿ ಸದರಿ ಔಷಧಿಯು ಲಭ್ಯವಿಲ್ಲದ ಕಾರಣದಿಂದಾಗಿ ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನರವರು ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರಿಂದ ಕೆ.ಟಿ.ಪಿ.ಪಿ ನಿಯಮಾನುಸಾರ ಅಲ್ಪಾವಧಿ ಇ-ಟೆಂಡರ್ ಕರೆಯಲು ಮಾನ್ಯ ಜಿಲ್ಲಾಧಿಕಾರಿಯವರಿಂದ ಸಂಸ್ಥೆಯ ಏಕ ಕಡತದಲ್ಲಿ ಅನುಮೋದನೆ ಪಡೆದು ಆರ್ಥಿಕ ಸಮಿತಿ ಸಭೆಯ ಘಟನ್ನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಅಲ್ಪಾವಧಿ ಇ-ಟೆಂಡರ್ ಅಧಿಸೂಚನೆ ಹೊರಡಿಸಿರುವುದನ್ನು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು / ಆರ್ಥಿಕ ಸಲಹೆಗಾರರು(ಪ್ರಭಾರ) ಸಭೆಯ ಮುಂದೆ ಮಂಡಿಸಿದರು.
<table>
<tr><th>Sl. No.</th><th>Item Name</th><th>Quantity</th><th>Rate Per vial</th><th>Total Amount</th></tr>
<tr><td>1</td><td>Ultra Pure Recombinant Factor VIII Injection 250 Units per vial (250MG)</td><td>400 Nos.</td><td>2410.00</td><td>9,64,000.00</td></tr>
<tr><td>2</td><td>Ultra Pure Recombinant Factor VIII Injection 500 Units per vial (500MG)</td><td>600 Nos.</td><td>4850.00</td><td>29,10,000.00</td></tr>
<tr><td></td><td colspan="3">Total</td><td>38,74,000.00</td></tr>
</table>
<u>ತೀರ್ಮಾನ:</u><br>
ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಜಿಲ್ಲೆಯಲ್ಲಿ ಹಿಮೋಫೀಲಿಯಾ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗೆ ಅಗತ್ಯವಿರುವ Ultra Pure Recombinant Factor VIII ಔಷಧಿಯನ್ನು ಖರೀದಿಸಲು ಕ್ರಮ ಕೈಗೊಳ್ಳುವಂತೆ ಮಾನ್ಯ ಜಿಲ್ಲಾಧಿಕಾರಿಗಳು, ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನರವರು ಏಕ ಕಡತದಲ್ಲಿ ಅನುಮೋದನೆ ನೀಡಿರುವುದನ್ನು ಹಾಗೂ ಆರ್ಥಿಕ ಸಮಿತಿ ಸಭೆಯ ಘಟನ್ನೋತ್ತರ ಅನುಮೋದನೆ ನಿರೀಕ್ಷಣೆ</td></tr>
</table>



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಮೇರೆಗೆ ಕೆ.ಟಿ.ಪಿ.ಪಿ ನಿಯಮಾನುಸಾರ ಅಲ್ಪಾವಧಿ ಟೆಂಡರ್ ಕರೆದಿರುವುದನ್ನು ಸಹ ಒಪ್ಪಿ ಅನುಮೋದಿಸಲಾಯಿತು. ಸದರಿ ಖರೀದಿಯು ಕೇವಲ ಸರ್ಕಾರದಿಂದ ಪುನ: ಹಿಮೋಫೀಲಿಯಾ ಸೊಸೈಟಿವತಿಯಿಂದ ಸರಬರಾಜು ಪ್ರಾರಂಭವಾಗುವ ತನಕ ಮಾತ್ರವೇ ಇರತಕ್ಕದೆಂದು ತೀರ್ಮಾನಿಸಲಾಯಿತು. |
| 11 | ಸಂಸ್ಥೆಯ ಬೋಧಕ ಆಸ್ಪತ್ರೆಯ ಆವರಣದಲ್ಲಿ ಕ್ಯಾನ್ಸರ್ ಕೇರ್ ಘಟಕವನ್ನು ಸ್ಥಾಪಿಸಲು ಅಗತ್ಯವಿರುವ ವೈದ್ಯಕೀಯ ಉಪಕರಣಗಳ ಸರಬರಾಜಿಗೆ ಇ-ಟೆಂಡರ್ ಕರೆಯುವ ಬಗ್ಗೆ. | ಸಂಸ್ಥೆಯ ಬೋಧಕ ಆಸ್ಪತ್ರೆಗೆ ಬರುತ್ತಿರುವ ಹಾಸನ ಹಾಗೂ ಸುತ್ತಮುತ್ತಲಿನ ಪ್ರದೇಶದ ಬಡ ಕ್ಯಾನ್ಸರ್ ರೋಗಿಗಳಿಗೆ ಉತ್ತಮ ಹಾಗೂ ಪರಿಪೂರ್ಣ ರೇಡಿಯೋಥೆರಪಿ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಸಂಸ್ಥೆಯ ಆವರಣದಲ್ಲಿ ರೂ.525.00 ಲಕ್ಷಗಳ ಮೊತ್ತದಲ್ಲಿ ಅಂಕಾಲಜಿ ಬ್ಲಾಕ್ ಕಟ್ಟಡ ನಿರ್ಮಾಣ ಮಾಡಲು ಹಾಗೂ ರೂ.1300.00 ಲಕ್ಷಗಳ ಮೊತ್ತದಲ್ಲಿ ಉಪಕರಣಗಳನ್ನು ಖರೀದಿಸಲು ಈ ರೀತಿಯಾಗಿ ಒಟ್ಟು ರೂ.1825.00 ಲಕ್ಷಗಳ ಅಂದಾಜು ಮೊತ್ತಕ್ಕೆ ಸರ್ಕಾರದ ಆದೇಶ ಸಂಖ್ಯೆ: ಆಕುಕ 248 ಕೆವಿಎಂ 2018, ದಿನಾಂಕ: 17-09-2018ರಂದು ಆಡಳಿತಾತ್ಮಕ ಅನುಮೋದನೆ ನೀಡಿ ಈ ಸಂಬಂಧಿತವಾಗಿ ಸಿವಿಲ್ ಕಾಮಗಾರಿಗಳಿಗೆ ರೂ.500.00 ಲಕ್ಷಗಳನ್ನು ಸರ್ಕಾರದ ಆದೇಶ ಸಂಖ್ಯೆ: ಆಕುಕ 248 ಕೆವಿಎಂ 2018, ದಿನಾಂಕ:16-11-2018ರಂದು ಬಿಡುಗಡೆ ಗೊಳಿಸಲಾಗಿರುತ್ತದೆ. ಕಾರ್ಯಪಾಲಕ ಅಭಿಯಂತರರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ಇವರು ಪ್ರಸ್ತುತ ವರ್ಷದಲ್ಲಿ ಅಂಕಾಲಜಿ ಬ್ಲಾಕ್ ಕಟ್ಟಡ ನಿರ್ಮಾಣ ಕಾಮಗಾರಿಗೆ ರೂ.635.00 ಲಕ್ಷಗಳ ಮೊತ್ತಕ್ಕೆ ಪರಿಷ್ಕೃತ ಅಂದಾಜು ಪಟ್ಟಿ ನೀಡಿ ಆಡಳಿತಾತ್ಮಕ ಅನುಮೋದನೆ ನೀಡಿ ಅಗತ್ಯವಿರುವ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿದ್ದ ಹಿನ್ನೆಲೆಯಲ್ಲಿ ಸಂಸ್ಥೆಯಿಂದ ಸರ್ಕಾರಕ್ಕೆ ದಿನಾಂಕ:19-10-2019ರಂದು ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.<br>ಸರ್ಕಾರದ ಪತ್ರ ಸಂಖ್ಯೆ: ಆಕುಕ 248.00 ಕೆವಿಎಂ 2018 (ಭಾಗ) ದಿನಾಂಕ:22.01.2020ರ ಆದೇಶದಲ್ಲಿ ಅಂಕಾಲಜಿ ಬ್ಲಾಕ್ ಕಟ್ಟಡ ನಿರ್ಮಾಣ ಕಾಮಗಾರಿಯ ರೂ.635.00 ಲಕ್ಷಗಳ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ ಈಗಾಗಲೇ ಲೆಕ್ಕಶೀರ್ಷಿಕೆ 4210-03-105-1-02-386 ನಿರ್ಮಾಣ ಅಡಿಯಲ್ಲಿ ಬಿಡುಗಡೆಗೊಳಿಸಲಾಗಿರುವ ರೂ.500.00 ಲಕ್ಷಗಳನ್ನು / ಈ ಘಟಕ ಸ್ಥಾಪನೆಗೆ ಮುಂದಿನ ದಿನಗಳಲ್ಲಿ ಬಿಡುಗಡೆಗೊಳಿಸಲಾಗುವ ಮೊತ್ತದಲ್ಲಿ ರೂ.25.00 ಲಕ್ಷಗಳನ್ನು ಈ ರೀತಿಯಾಗಿ ಒಟ್ಟು ರೂ.525.00 ಲಕ್ಷಗಳನ್ನು ಬಳಕೆ ಮಾಡಿಕೊಳ್ಳತಕ್ಕದ್ದು ಹಾಗೂ ಉಳಿದಂತೆ ಸದರಿ ಅಂಕಾಲಜಿ ಬ್ಲಾಕ್ ಕಟ್ಟಡದ ಅಂದಾಜು ಪಟ್ಟಿಯಲ್ಲಿ ಹೆಚ್ಚುವರಿಯಾದ ಮೊತ್ತ ರೂ. 110.00 ಲಕ್ಷಗಳನ್ನು ಸಂಸ್ಥೆಯ ಸ್ವಂತ ಸಂಪನ್ಮೂಲದಿಂದ ಭರಿಸಿಕೊಳ್ಳ ತಕ್ಕದೆಂದು ಆದೇಶ ನೀಡಿರುತ್ತದೆ. ಸದರಿ ಆದೇಶದಂತೆ ದಿನಾಂಕ:12.02.2020ರಂದು ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರುರವರಿಗೆ |



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ತುರ್ತಾಗಿ ಕಾಮಗಾರಿಯನ್ನು ಕೈಗೊಳ್ಳುವಂತೆ ಪತ್ರ ಬರೆಯಲಾಗಿರುತ್ತದೆ. |

ಹಾಗೂ

ಕ್ಯಾನ್ಸರ್ ಕೇರ್ ಘಟಕ ನಿರ್ಮಾಣಕ್ಕೆ ಈ ಕೆಳಗೆ ನಮೂದಿಸಿರುವ ವೈದ್ಯಕೀಯ ಉಪಕರಣಗಳ ಅಗತ್ಯವಿದ್ದು, ಈ ಉಪಕರಣವನ್ನು ಸರಬರಾಜು ಮಾಡಿಕೊಡುವಂತೆ ಕ್ಯಾನ್ಸರ್ ಚಿಕಿತ್ಸಾ ವಿಭಾಗದ ಮುಖ್ಯಸ್ಥರು, ಮನವಿ ಸಲ್ಲಿಸಿರುವುದನ್ನು ಸರ್ಕಾರವು ಈ ಹಿಂದೆ ಕ್ಯಾನ್ಸರ್ ಘಟಕದ ಕಟ್ಟಡ ನಿರ್ಮಾಣ ಮತ್ತು ಉಪಕರಣಗಳ ಖರೀದಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದ ರೂ.1825.00ಲಕ್ಷಗಳು ಹಾಗೂ ಅಂಕಾಲಜಿ ಕಟ್ಟಡ ಕಾಮಗಾರಿ ಪರಿಷ್ಕೃತ ಮೊತ್ತ ರೂ.110.00 ಲಕ್ಷಗಳು ಸೇರಿದಂತೆ ಒಟ್ಟು ರೂ.1935.00 ಲಕ್ಷಗಳಾಗಿದ್ದು ಸರ್ಕಾರದ ಅನುದಾನ ರೂ.1500.00 ಲಕ್ಷಗಳು ಮತ್ತು ಸಂಸ್ಥೆಯ ಸ್ವಂತ ಸಂಪನ್ಮೂಲದಿಂದ ರೂ.435.00 ಲಕ್ಷಗಳನ್ನು (ರೂ. 325.00 ಲಕ್ಷ+ ರೂ.110.00 ಲಕ್ಷ) ಬಳಸಿಕೊಂಡು ಒಟ್ಟಾರೆಯಾಗಿ ಉದ್ದೇಶಿತ ಅಂಕಾಲಜಿ ಬ್ಲಾಕ್ ಕಟ್ಟಡ ನಿರ್ಮಾಣವನ್ನು ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರುರವರ ಮುಖಾಂತರ ಕೈಗೊಳ್ಳಲು ಹಾಗೂ ಅವಶ್ಯಕ ವೈದ್ಯಕೀಯ ಉಪಕರಣಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಕರೆಯುವ ಬಗ್ಗೆಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು / ಆರ್ಥಿಕ ಸಲಹೆಗಾರರು(ಪ್ರಭಾರ) ಸಭೆಯ ಮುಂದೆ ಮಂಡಿಸಿದರು.

| ಕ್ರ ಸಂ | ವಿವರ | ಪ್ರಮಾಣ | ಅಂದಾಜು ದರ (ಲಕ್ಷಗಳಲ್ಲಿ) | ಒಟ್ಟು ಮೊತ್ತ (ಲಕ್ಷಗಳಲ್ಲಿ) |
|---|---|---|---|---|
| 01 | Low energy Linear accelerator with IMRT facility | 1 | 900.00 | 900.00 |
| 02 | Cobalt-60 HDR Brachytherapy System, | 1 | 250.00 | 250.00 |
| 03 | Dosimetry & Mould room tools | 1 | 150.00 | 150.00 |
| | **Total** | | | **1300.00** |

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕವಾಗಿ ಚರ್ಚಿಸಿ ಕ್ಯಾನ್ಸರ್ ಘಟಕ ಸ್ಥಾಪಿಸಲು ಸರ್ಕಾರದಿಂದ ದೊರೆತಿರುವ ಆಡಳಿತಾತ್ಮಕ ಅನುಮೋದನೆಯಂತೆ ಸರ್ಕಾರದಿಂದ ಬಿಡುಗಡೆಯಾಗಿರುವ ಮತ್ತು ಬಿಡುಗಡೆಯಾಗುವ ಅನುದಾನ ಸೇರಿದಂತೆ ರೂ.1500 ಲಕ್ಷಗಳು ಹಾಗೂ ಸಂಸ್ಥೆಯ ಸ್ವಂತ ಸಂಪನ್ಮೂಲದಿಂದ ಸಂಗ್ರಹವಾಗುವ ರೂ.435.00 ಲಕ್ಷಗಳಿಗೆ ಅನುಗುಣವಾಗಿ ಅಗತ್ಯವಿರುವ ಉಪಕರಣಗಳಿಗೆ ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಕರೆಯುವುದೆಂದು ಹಾಗೂ



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಉದ್ದೇಶಿತ ಕಾಮಗಾರಿಗಳನ್ನು ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರುರವರ ಮುಖಾಂತರ ಕೈಗೊಳ್ಳುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 12 | ಸಂಸ್ಥೆಯ ಬೋಧಕ ಆಸ್ಪತ್ರೆಯ ದಂತ ಚಿಕಿತ್ಸಾ ವಿಭಾಗಕ್ಕೆ ಅಗತ್ಯವಿರುವ Consumable materialsಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಮೂಲಕ ಸರಬರಾಜು ಮಾಡುವ ಬಗ್ಗೆ. | ಸಂಸ್ಥೆಯ ಬೋಧಕ ಆಸ್ಪತ್ರೆಯ ದಂತ ಚಿಕಿತ್ಸಾ ವಿಭಾಗಕ್ಕೆ ಚಿಕಿತ್ಸೆಗೆ ಬರುವ ರೋಗಿಗಳಿಗೆ ಒಂದು ವರ್ಷದ ಅವಧಿಗೆ ಅಗತ್ಯವಾಗಿ ಬೇಕಾಗಿರುವ ದಂತ ಚಿಕಿತ್ಸಾ Consumable materials ಗಳ ಅಂದಾಜು ರೂ.19,00,000/-ಗಳಾಗಿದ್ದು ಸದರಿ ಸಾಮಗ್ರಿಗಳನ್ನು ಬಡ ರೋಗಿಗಳ ಚಿಕಿತ್ಸಾ ಹಿತದೃಷ್ಟಿಯಿಂದ ಅತ್ಯವಶ್ಯಕವಾಗಿದ್ದು ಸದರಿ ದಂತ ಚಿಕಿತ್ಸಾ Consumable materialsಗಳನ್ನು ಒದಗಿಸಿಕೊಡಬೇಕೆಂದು ವಿಭಾಗದ ಮುಖ್ಯಸ್ಥರು, ದಂತ ಚಿಕಿತ್ಸಾ ವಿಭಾಗ ಹಿಮ್ಸ್,ಹಾಸನ ರವರು ಮನವಿ ಸಲ್ಲಿಸಿರುವುದನ್ನು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು /ಆರ್ಥಿಕ ಸಲಹೆಗಾರರು (ಪ್ರಭಾರ) ಸಭೆಯ ಮುಂದೆ ಮಂಡಿಸಿದರು.<br><br>ಕ್ರ ಸಂ: 01 — ವಿವರ: Consumable materials for Dental department (List enclosed Annexure-1) — ಅಂದಾಜು ಮೊತ್ತ: 19,00,000/-<br><br>**ತೀರ್ಮಾನ:**<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ದಂತ ಚಿಕಿತ್ಸೆ ವಿಭಾಗದ ರೋಗಿಗಳ ಚಿಕಿತ್ಸೆಗೆ ದಂತ ಚಿಕಿತ್ಸಾ Consumable materials ಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಮೂಲಕ ಖರೀದಿಸುವುದೆಂದು ಸದರಿ ವೆಚ್ಚವನ್ನು ಸಂಸ್ಥೆಗೆ ಬಿಡುಗಡೆಯಾಗುವ ಆಸ್ಪತ್ರೆ ನಿರ್ವಹಣಾ ಅನುದಾನದಿಂದ ಅಥವಾ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 13 | ಹಿಮ್ಸ್ ಸಂಸ್ಥೆಯ ಹಳೆ ಬೋಧಕ ಆಸ್ಪತ್ರೆಯ ಮ್ಯಾನಿಪೋಲ್ಡರ್ ಕೊಠಡಿಯನ್ನು ಪಂಪ್ ಹೌಸ್ ಪಕ್ಕಕ್ಕೆ ಸ್ಥಳಾಂತರಿಸಲು | ಸಂಸ್ಥೆಯ ಹಳೆಯ ಬೋಧಕ ಆಸ್ಪತ್ರೆಯ ಮ್ಯಾನಿಪೋಲ್ಡರ್ ಕೊಠಡಿಯು ತುಂಬಾ ಹಳೆಯದಾಗಿ ಶಿಥಿಲಗೊಂಡಿದ್ದು ಹಾಗೂ ತಗ್ಗು ಪ್ರದೇಶದಲ್ಲಿರುವುದರಿಂದ ಮಳೆ ಬಂದಾಗ ಕೊಠಡಿಗೆ ನೀರು ನುಗ್ಗಿ Air Compressor and Vacuum pumpಗಳು ಸುಟ್ಟು ಹೋಗುವ ಸಂಭವನೀಯತೆ ಹೆಚ್ಚು ಇರುವುದರಿಂದ ತುರ್ತಾಗಿ ಹಳೆ ಆಸ್ಪತ್ರೆಯ ಮ್ಯಾನಿಪೋಲ್ಡರ್ ಕೊಠಡಿಯನ್ನು ಬೇರೆ ಕಡೆ ಎತ್ತರ ಪ್ರದೇಶಕ್ಕೆ ಸ್ಥಳಾಂತರಿಸಿ ಕೊಡಬೇಕೆಂದು ವಿಭಾಗದ ಮುಖ್ಯಸ್ಥರು ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಮ್ಯಾನಿಪೋಲ್ಡರ್ ಕೊಠಡಿಯನ್ನು ಸ್ಥಳಾಂತರಿಸಲು ಅಂದಾಜು ಪಟ್ಟಿ ಸಲ್ಲಿಸುವಂತೆ ಸಹಾಯಕ |



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ಅವಶ್ಯಕ ಕೊಠಡಿ ನಿರ್ಮಿಸುವ ಬಗ್ಗೆ. | ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ-ವಿಭಾಗ, ಹಾಸನ ರವರಿಗೆ ಪತ್ರ ಬರೆಯಲಾಗಿದ್ದು, ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಈ ಕೆಳಕಂಡಂತೆ ಅಂದಾಜು ಪಟ್ಟಿ ಸಲ್ಲಿಸಿರುವುದನ್ನು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು /ಆರ್ಥಿಕ ಸಲಹೆಗಾರರು(ಪ್ರಭಾರ) ಸಭೆಯ ಮುಂದೆ ಮಂಡಿಸಿದರು.<br><br>ಕ್ರ ಸಂ \| ಕಾಮಗಾರಿಯ ವಿವರ \| ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)<br>1 \| ಹಿಮ್ಸ್ ಸಂಸ್ಥೆಯ ಹಳೆ ಬೋಧಕ ಆಸ್ಪತ್ರೆಯ ಮ್ಯಾನಿಪೋಲ್ಡ್‌ರ್ ಕೊಠಡಿಯನ್ನು ಪಂಪ್ ಹೌಸ್ ಪಕ್ಕಕ್ಕೆ ಸ್ಥಳಾಂತರಿಸಲು ಕೊಠಡಿ ನಿರ್ಮಿಸಲು ಅವಶ್ಯಕವಿರುವ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ. \| 5.00<br><br>**ತೀರ್ಮಾನ:**<br><br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ Air Compressor and Vacuum pumpಗಳು ರಕ್ಷಣೆಯ ಹಿತದೃಷ್ಟಿಯಿಂದ ಮ್ಯಾನಿಪೋಲ್ಡ್‌ರ್ ಕೊಠಡಿಯನ್ನು ಪಂಪ್ ಹೌಸ್ ಪಕ್ಕಕ್ಕೆ ಸ್ಥಳಾಂತರಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ-ವಿಭಾಗ, ಹಾಸನರವರಿಂದ ಕೈಗೊಳ್ಳಲು ನಿಯಮಾನುಸಾರ ಕಾರ್ಯಾದೇಶ ನೀಡುವುದೆಂದು ಹಾಗೂ ಸದರಿ ವೆಚ್ಚವನ್ನು ಯೂಜರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 14 | ಹಿಮ್ಸ್ ಸಂಸ್ಥೆಯ ಅಧೀನ ಸಂಸ್ಥೆಯಾದ ಹಾಸನ ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ- ದಲ್ಲಿ ಸಿವಿಲ್ ಮತ್ತು ಎಲೆಕ್ಟ್ರಿಕಲ್ಸ್ ಕಾಮಗಾರಿಗಳ ಪರಿಷ್ಕೃತ ಅಂದಾಜು ಮೊತ್ತಕ್ಕೆ | ಹಿಮ್ಸ್ ಸಂಸ್ಥೆಯ ಅಧೀನ ಸಂಸ್ಥೆಯಾದ ಹಾಸನ ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಇಲ್ಲಿನ ಗೇಟ್ ದುರಸ್ತಿ, ಬಾಲಕ ಮತ್ತು ಬಾಲಕಿಯರ ವಸತಿಗೃಹಗಳ 1) ಕಿಟಕಿ-ಬಾಗಿಲುಗಳ ದುರಸ್ತಿ, ಸೋರುತ್ತಿರುವ ಮೇಲ್ಛಾವಣಿ ದುರಸ್ತಿ, 2)ಕಾಲೇಜಿನ ಮುಂಭಾಗ ಮತ್ತು ಬಲಭಾಗದ ಕಾಂಪೌಂಡ್ ದುರಸ್ತಿ, 3) ಆಡಿಟೋರಿಯಂ ದುರಸ್ತಿ ಇತ್ಯಾದಿ ಸಿವಿಲ್ ಮತ್ತು ಎಲೆಕ್ಟ್ರಿಕಲ್ಸ್‌ನ 03 ಕಾಮಗಾರಿಗಳನ್ನು ಕೈಗೊಳ್ಳಲು 11ನೇ ಕಾಮಗಾರಿ ಸಮಿತಿ ಸಭೆ ಮತ್ತು 21ನೇ ಆರ್ಥಿಕ ಸಮಿತಿ ಸಭೆ ಮತ್ತು 32ನೇ ಆಡಳಿತ ಮಂಡಳಿ ಸಭೆಗಳಲ್ಲಿ ವಿಷಯವನ್ನು ಮಂಡಿಸಿ ರೂ.12.50 ಲಕ್ಷಗಳ ವೆಚ್ಚಕ್ಕೆ ಅನುಮೋದನೆ ಪಡೆಯಲಾಗಿತ್ತು. ನಂತರ ಸದರಿ ಕಾಮಗಾರಿಗೆ 2019-20ನೇ ಸಾಲಿಗೂ ಮುಂದುವರಿದ ಪರಿಷ್ಕೃತ ಅಂದಾಜು ಮೊತ್ತ ರೂ.14.52 ಲಕ್ಷಗಳಾಗುತ್ತಿದ್ದು (ಜಿ.ಎಸ್.ಟಿ. ಸೇರಿಸಿಕೊಂಡು), ಸದರಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಮತ್ತು ಹೆಚ್ಚುವರಿ |



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ಅನುಮೋದನೆ ಪಡೆಯುವ ಬಗ್ಗೆ. | ಅನುದಾನ ಬಿಡುಗಡೆ ಮಾಡುವಂತೆಯೂ ಅಥವಾ ರೂ.12.50 ಲಕ್ಷದ ಮೊತ್ತಕ್ಕೆ ಹೊಸ ದರಪಟ್ಟಿಯನ್ವಯ ಅಂದಾಜಿನ ಐಟಂಗಳನ್ನು ಕಡಿತಗೊಳಿಸಿ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ನೀಡುವಂತೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾಸನ ವಿಭಾಗ, ಹಾಸನ ರವರು ಪತ್ರ ಬರೆದ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಗಳು ತುರ್ತು ಅವಶ್ಯಕ ಇರುವುದರಿಂದ ರೂ.12.50 ಲಕ್ಷಗಳ ಮೊತ್ತಕ್ಕೆ ಅನುಗುಣವಾಗಿ ಕಾಮಗಾರಿ ಕೈಗೊಳ್ಳುವಂತೆ ಆರ್ಥಿಕ ಸಮಿತಿ ಮತ್ತು ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಪತ್ರ ಬರೆದಿರುವುದನ್ನು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು /ಆರ್ಥಿಕ ಸಲಹೆಗಾರರು(ಪ್ರಭಾರ) ಸಭೆಯ ಮುಂದೆ ಮಂಡಿಸಿದರು.<br>**ತೀರ್ಮಾನ:**<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಮೇಲ್ಕಂಡ ಕಾಮಗಾರಿಗಳನ್ನು ಕೈಗೊಳ್ಳಲು 2018–19ನೇ ಸಾಲಿನಲ್ಲಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಯೊಂದಿಗೆ ರೂ.12.50 ಲಕ್ಷಗಳ ಅನುದಾನ ಬಿಡುಗಡೆಯಾಗಿರುವುದರಿಂದ ಹೊಸ ದರಪಟ್ಟಿಯನ್ವಯ ಅಂದಾಜಿನಂತೆ ಕೆಲವು ಐಟಂಗಳನ್ನು ಕಡಿತಗೊಳಿಸಿ ರೂ.12.50 ಲಕ್ಷದ ಮೊತ್ತಕ್ಕೆ ಅನುಗುಣವಾಗಿ ಕೆ.ಟಿ.ಪಿ.ಪಿ. ನಿಯಮಾನುಸಾರ ಇ–ಟೆಂಡರ್ ಕರೆಯುವುದೆಂದು ಹಾಗೂ ಸದರಿ ಕಾಮಗಾರಿ ನಿರ್ವಹಣೆಯನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾಸನ ವಿಭಾಗ, ಹಾಸನರವರ ಮುಖಾಂತರ ಕೈಗೊಳ್ಳುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 15 | ಹಿಮ್ಸ್ ಸಂಸ್ಥೆಯ ಕಾಲೇಜು ಕಟ್ಟಡದ ನೆಲಮಾಳಿಗೆಯಲ್ಲಿ ಸ್ಕಿಲ್ ಲ್ಯಾಬ್ ಪ್ರಾರಂಭಿಸಲು ಅವಶ್ಯಕ ಸಿವಿಲ್ ಮತ್ತು ಎಲೆಕ್ಟ್ರಿಕಲ್ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ. | ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಡಿಸೆಂಬರ್ –2019ರ ಒಳಗೆ ಸ್ಕಿಲ್ ಲ್ಯಾಬ್ ಪ್ರಾರಂಭಿಸಲು ಕ್ರಮವಹಿಸುವಂತೆ, ಎಮ್.ಸಿ.ಐ. ನವದೆಹಲಿ ಇವರ ಸೂಚನೆಯ ಮೇರೆಗೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ಇವರು ಈ ಬಗ್ಗೆ ಕೂಡಲೇ ಕ್ರಮವಹಿಸುವಂತೆ ನಿರ್ದೇಶನ ನೀಡಿರುತ್ತಾರೆ. ಸದರಿ ನಿರ್ದೇಶನದಂತೆ ಸಂಸ್ಥೆಯ ಕಾಲೇಜು ವಿಭಾಗದ ನೆಲ ಮಾಳಿಗೆಯ ಖಾಲಿ ಇರು ಸ್ಥಳದಲ್ಲಿ ಸ್ಕಿಲ್ ಲ್ಯಾಬ್ ನಿರ್ಮಿಸಲು ಉದ್ದೇಶಿಸಲಾಗಿದ್ದು ಇದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ನೋಡಲ್ ಅಧಿಕಾರಿಯನ್ನಾಗಿ ಡಾ. ಶ್ರೀರಂಗ, ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು, ಹಿಮ್ಸ್ ಹಾಸನ ಇವರನ್ನು ನೇಮಿಸಲಾಗಿರುತ್ತದೆ. ಸದರಿ ಲ್ಯಾಬ್ ನಿರ್ಮಾಣಕ್ಕೆ ಅವಶ್ಯಕವಿರುವ ಸಿವಿಲ್ ಮತ್ತು ಎಲೆಕ್ಟ್ರಿಕಲ್ ಕಾಮಗಾರಿಗಳನ್ನು ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ |



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ-ವಿಭಾಗ, ಹಾಸನರವರಿಗೆ ಪತ್ರ ಬರೆಯಲಾಗಿದ್ದು, ಸದರಿ ಇಲಾಖೆಯವರು ಈ ಕೆಳಕಂಡ ಕಾಮಗಾರಿಗಳಿಗೆ ಅಂದಾಜು ಪಟ್ಟಿ ಸಲ್ಲಿಸಿರುವುದನ್ನು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು /ಆರ್ಥಿಕ ಸಲಹೆಗಾರರು(ಪ್ರಭಾರ) ಸಭೆಯ ಮುಂದೆ ಮಂಡಿಸಿದರು. |

| ಕ್ರ. ಸಂ. | ಕಾಮಗಾರಿಗಳ ವಿವರ | ಅಂದಾಜು ಮೊತ್ತ (ಲಕ್ಷಗಳು) |
|---|---|---|
| 01 | Providing Burnt brick masonary for all round wall closure. | 45.00 |
| 02 | Providing Aliminium windows, partitions & doors | |
| 03 | Providing Vitrified tiles flooring, Wall tiles dadooing , ceramic tiles flooring, granite platforms etc., | |
| 04 | Providing Toughened glass door for main entrance. | |
| 05 | Providing New Basins, Water supply & sanitary lines for old toilet renovations | |
| 06 | Providing Necessary electrical wiring , sockets, switches, Fixtures etc., | |
| 07 | Providing Air conditioners along with stabilizers, accessories along with false ceiling. | |
| 08 | Providing & replacing door frames & shutters along with door fixtures | |
| 09 | Providing painting & finishing works etc., | |
| 10 | New toilet block works with water supply & electrification works . | |

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಎಮ್.ಸಿ.ಐ. ನಿರ್ದೇಶನದಂತೆ ಸ್ಕಿಲ್ ಲ್ಯಾಬ್ ಪ್ರಾರಂಭಿಸುವುದು ಅತ್ಯವಶ್ಯಕವಾಗಿರುವುದರಿಂದ ಸದರಿ ಕಾಮಗಾರಿ ನಿರ್ವಹಣೆಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ-ವಿಭಾಗ, ಹಾಸನರವರಿಂದ ನಿರ್ವಹಿಸುವುದೆಂದು ಹಾಗೂ ಕಾಮಗಾರಿ ವೆಚ್ಚವನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಬೆಂಗಳೂರು ನೀಡಿರುವ ಅನುದಾನದಲ್ಲಿ ಅಥವಾ ಯೂನಿರ್ವಸಿಟಿ ಖಾತೆಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಕ್ರಮ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr>
<td>16</td>
<td>ಹಿಮ್ಸ್ ಸಂಸ್ಥೆಯ ಹಳೆ ಮತ್ತು ಹೊಸ ಬೋಧಕ ಆಸ್ಪತ್ರೆಯ ಕಟ್ಟಡಗಳಲ್ಲಿ ಎನ್.ಕ್ಯೂ.ಎ.ಎಸ್., ಎನ್.ಎ.ಬಿ.ಹೆಚ್., ಮತ್ತು ಕಾಯಕಲ್ಪ ಯೋಜನೆಯ ಮತ್ತು ರೋಗಿಗಳ ಹಿತದೃಷ್ಟಿಯಿಂದ ಆಯ್ದ ಕೊಠಡಿಗಳಿಗೆ ಬಣ್ಣ ಬಳಿಯುವ ಕಾಮಗಾರಿ ಕೈಗೊಳ್ಳುವ ಬಗ್ಗೆ.</td>
<td>ಸಂಸ್ಥೆಯ ಶ್ರೀ ಚಾಮರಾಜೇಂದ್ರ ಹಳೆಯ ಆಸ್ಪತ್ರೆಯ ಮೊದಲನೇ ಮಹಡಿಯ ಕಟ್ಟಡದ ಕಾಮಗಾರಿಗಳು ನಡೆಯುತ್ತಿದ್ದು, ನೆಲಮಹಡಿಯಲ್ಲಿರುವ ಕೊಠಡಿಗಳ ಸಂಖ್ಯೆ: 1 ರಿಂದ 15 ರವರೆಗೆ, 41 ರಿಂದ 48 ರವರೆಗೆ, 54 ರಿಂದ 57 ರವರೆಗೆ ಮತ್ತು ಎನ್.ಆರ್.ಸಿ ವಿಭಾಗದ ಮಕ್ಕಳ ಆಟದ ಕೊಠಡಿ, ಅಡುಗೆ ಮನೆ, ವಿಶ್ರಾಂತಿ ಸ್ಥಳಗಳಲ್ಲಿನ ಗೋಡೆಗಳಿಗೆ ಮತ್ತು ಸೀಲಿಂಗ್‌ಗೆ ಬಣ್ಣ ಹೊಡೆಸುವಂತೆಯು ಮತ್ತು ಎನ್.ಕ್ಯೂ.ಎ.ಎಸ್. ಕಾಯಕಲ್ಪ ಹಾಗೂ ಎನ್.ಎ.ಬಿ.ಹೆಚ್ ಕಾರ್ಯಕ್ರಮವು ಅನುಷ್ಠಾನದಲ್ಲಿರುವುದರಿಂದ ಪರಿವೀಕ್ಷಣೆ ತಂಡದವರು ಆಗಮಿಸುವುದರೊಳಗೆ ಮೇಲ್ಕಂಡ ಬಣ್ಣದ ಕೆಲಸವನ್ನು ನಿರ್ವಹಿಸುವ ಸಲುವಾಗಿ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ-ವಿಭಾಗ, ಹಾಸನರವರಿಗೆ ಪತ್ರ ಬರೆಯಲಾಗಿದ್ದು, ಸದರಿ ಇಲಾಖೆಯಿಂದ ಅಂದಾಜು ಪಟ್ಟಿ ಸಲ್ಲಿಸುವುದು ವಿಳಂಬವಾದ ಹಿನ್ನೆಲೆಯಲ್ಲಿ ಎನ್.ಕ್ಯೂ.ಎ.ಎಸ್. ಕಾಯಕಲ್ಪ ಹಾಗೂ ಎನ್.ಎ.ಬಿ.ಹೆಚ್ ಪರಿವೀಕ್ಷಣೆ ಹಿನ್ನೆಲೆಯಲ್ಲಿ ಖಾಸಗಿ ಸಂಸ್ಥೆಯ ಮೂಲಕ ಕೆ.ಟಿ.ಪಿ.ಪಿ.ನಿಯಮಾನುಸಾರ ದರಪಟ್ಟಿ ಆಧಾರದಲ್ಲಿ ಬಣ್ಣದ ಕೆಲಸ ನಿರ್ವಹಿಸುತ್ತಿರುವುದನ್ನು ಅನುಮೋದಿಸಲು ಮತ್ತು ಸದರಿ ಕಾಮಗಾರಿಯ ನಿರ್ವಹಣೆಯ ವೆಚ್ಚವನ್ನು ಕಾಯಕಲ್ಪ ಯೋಜನೆಯಡಿ ಬಂದ ಬಹುಮಾನದ ಮೊತ್ತದಿಂದ ಭರಿಸುವುದರ ಬಗ್ಗೆ ಅನುಮೋದನೆಗಾಗಿ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು /ಆರ್ಥಿಕ ಸಲಹೆಗಾರರು(ಪ್ರಭಾರ) ಸಭೆಯ ಮುಂದೆ ಮಂಡಿಸಿದರು.
<table>
<tr><th>ಕ್ರ. ಸಂ.</th><th>ಕಾಮಗಾರಿಗಳ ವಿವರ</th><th>ಅಂದಾಜು ಮೊತ್ತ (ಲಕ್ಷಗಳು)</th></tr>
<tr><td>01</td><td>ಹಳೆ ಆಸ್ಪತ್ರೆಯ ಎಸ್.ಎನ್.ಸಿ.ಯು. ವಿಭಾಗದ ಕೊಠಡಿಗಳು, ಶಸ್ತ್ರ ಚಿಕಿತ್ಸಾ ಕೊಠಡಿಗಳು ಮತ್ತು ಕಾರಿಡಾರ್‌ನ ಸ್ಥಳಗಳು (ಓ.ಟಿ. ವಿಭಾಗ) ರಕ್ತ ನಿಧಿ ವಿಭಾಗದ ಕೊಠಡಿಗಳು ಮತ್ತು ಕಾರಿಡಾರ್ ಸ್ಥಳಗಳು, ಮಕ್ಕಳ ವಿಭಾಗದ ಕಾರಿಡಾರ್ ಸ್ಥಳಗಳ ಮೇಲ್ಛಾವಣಿ ಮತ್ತು ಗೋಡೆಗಳಿಗೆ ಹಾಗೂ ಕಿಟಕಿ, ಬಾಗಿಲುಗಳಿಗೆ ಬಣ್ಣ ಬಳಿಯುವ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ</td><td>4.49</td></tr>
</table>
<u>ತೀರ್ಮಾನ:</u><br>
ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಮೇಲ್ಕಂಡ ಕಾಮಗಾರಿಗಳನ್ನು ತುರ್ತು ಹಿನ್ನೆಲೆಯಲ್ಲಿ ಖಾಸಗಿ ಸಂಸ್ಥೆಯ ಮೂಲಕ ಕೆ.ಟಿ.ಪಿ.ಪಿ.ನಿಯಮಾನುಸಾರ ದರಪಟ್ಟಿ ಆಧಾರದಲ್ಲಿ ನಿರ್ವಹಿಸುತ್ತಿರುವುದನ್ನು ಒಪ್ಪಿ</td>
</tr>
</table>



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಅನುಮೋದಿಸಲಾಯಿತು. ಮತ್ತು ಸದರಿ ಕಾಮಗಾರಿಯ ನಿರ್ವಹಣೆಯ ವೆಚ್ಚವನ್ನು ಕಾಯಕಲ್ಪ ಯೋಜನೆಯಡಿ ಬಂದ ಬಹುಮಾನದ ಮೊತ್ತದಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 17 | ಹಿಮ್ಸ್ ಸಂಸ್ಥೆಯ 350 ರಿಂದ 750 ಹಾಸಿಗೆಗಳ ಹೊಸ ಬೋಧಕ ಆಸ್ಪತ್ರೆಯ ಕಟ್ಟಡಕ್ಕೆ ಅಗ್ನಿಶಾಮಕ ಇಲಾಖೆಯ ಮಾನ ದಂಡಗಳ ಪ್ರಕಾರ Fire protection system ಅಳವಡಿಸಿ ಕೊಳ್ಳುವ ಬಗ್ಗೆ. | ಈ ಸಂಸ್ಥೆಯ 350 ರಿಂದ 750 ಹಾಸಿಗೆಗಳ ಬೋಧಕ ಆಸ್ಪತ್ರೆಯ ಕಟ್ಟಡವು 5 ಮಹಡಿಗಳ ಕಟ್ಟಡವಾಗಿದ್ದು, ನಿರ್ಮಾಣದ ಸಮಯದಲ್ಲಿ ಸದರಿ ಕಟ್ಟಡಕ್ಕೆ ಅಗ್ನಿ ಶಾಮಕ ವ್ಯವಸ್ಥೆಯನ್ನು (Fire protection system) ಅಳವಡಿಸಿರುವುದಿಲ್ಲ. ಸದರಿ ಕಟ್ಟಡಕ್ಕೆ ಅಗ್ನಿ ಶಾಮಕ ವ್ಯವಸ್ಥೆಯನ್ನು (Fire protection system) ಅಳವಡಿಸಲು ತಗುಲುವ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ ಸರ್ಕಾರದಿಂದ ಸದರಿ ಪ್ರಸ್ತಾವನೆಗೆ ಅನುಮೋದನೆ ದೊರಯದ ಕಾರಣ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಸಾದ್ಯವಾಗಿರುವುದಿಲ್ಲ. ಹೊಸ ಆಸ್ಪತ್ರೆ ಕಟ್ಟಡಕ್ಕೆ Fire protection Systemನ್ನು ಅಳವಡಿಸಲು ತಗುಲುವ ವೆಚ್ಚಕ್ಕೆ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ-ವಿಭಾಗ ಹಾಸನ ರವರಿಗೆ ದಿನಾಂಕ:25.02.2020 ರಂದು ಪತ್ರ ಬರೆಯಲಾಗಿರುತ್ತದೆ. ಹಾಗೂ Fire protection Systemನ್ನು ಅಳವಡಿಸಲು ತಗುಲುವ ಅಂದಾಜು ವೆಚ್ಚವನ್ನು 2020-2021ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿಯೂ ಸೇರ್ಪಡೆಗೊಳಿಸಲಾಗಿರುತ್ತದೆ.<br>ಹೊಸ ಬೋಧಕ ಆಸ್ಪತ್ರೆ ಕಟ್ಟಡಕ್ಕೆ ಬರುವ ರೋಗಿಗಳ, ಸಾರ್ವಜನಿಕರ, ಸಿಬ್ಬಂದಿಗಳ, ವಿದ್ಯಾರ್ಥಿಗಳ ರಕ್ಷಣಾ ಹಿತದೃಷ್ಟಿಯಿಂದ ಮತ್ತು ಎನ್.ಎ.ಬಿ.ಹೆಚ್. ಕಾರ್ಯಕ್ರಮವು ಅನುಷ್ಠಾನಗೊಂಡಿರುವುದರಿಂದ ತುರ್ತಾಗಿ ಅಗ್ನಿ ಶಾಮಕ ವ್ಯವಸ್ಥೆಯನ್ನು ಅಳವಡಿಸಿ ಕೊಡುವಂತೆ ಶಸ್ತ್ರ ಚಿಕಿತ್ಸಕರು/ವೈದ್ಯಕೀಯ ಅಧೀಕ್ಷಕರ ಮುಖಾಂತರ ಉಲ್ಲೇಖಿತ ಪತ್ರದಲ್ಲಿ ಶುಶ್ರೂಷಕ ಅಧೀಕ್ಷಕರು ದರ್ಜೆ-1, ಶ್ರೀ ಚಾಮರಾಜೇಂದ್ರ ಹಿಮ್ಸ್, ಬೋಧಕ ಆಸ್ಪತ್ರೆ, ಹಾಸನ ರವರು ಮನವಿ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಎಲ್ಲಾ ಅಂತಸ್ತುಗಳಿಗೆ Fire protection Systemನ್ನು ಅಳವಡಿಸಲು Fire hydrant, Fire Sprinkler, Fire Alarm, Fire Extinguishers , Fire Sigrages, Fire Pump Room ಹಾಗೂ ಇತ್ಯಾದಿ ಅಳವಡಿಕೆಗಳಿಗೆ ಅಂದಾಜು ರೂ.1,58,82,682.00 ಆಗಬಹುದೆಂದು ಸಂಬಂಧಿಸಿದ ಖಾಸಗಿ ತಾಂತ್ರಿಕ ಸಂಸ್ಥೆಯವರು ತಿಳಿಸಿರುತ್ತಾರೆ.<br>ಮುಂದುವರೆದು ಬೋಧಕ ಆಸ್ಪತ್ರೆಯಲ್ಲಿ ಎನ್.ಎ.ಬಿ.ಹೆಚ್. ಕಾರ್ಯಕ್ರಮವು ಅನುಷ್ಠಾನಗೊಂಡಿರುವುದರಿಂದ ಅತೀ ತುರ್ತಾಗಿ ಬೋಧಕ ಆಸ್ಪತ್ರೆಯ 4ನೇ ಮಹಡಿ ಮತ್ತು 3ನೇ ಮಹಡಿಗೆ ಈ ಕೆಳಕಂಡ Fire protection System ನಲ್ಲಿ |



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|

ಒಳಗೊಂಡಿದ್ದ ಕೆಲವು ಆಯ್ದ ಕಾಮಗಾರಿಗಳನ್ನು ಅತೀ ತುರ್ತಾಗಿ ಕೈಗೊಳ್ಳಬೇಕಾಗಿದ್ದು ವಿವರ ಕೆಳಕಂಡಂತೆ ಇರುವುದನ್ನು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು /ಆರ್ಥಿಕ ಸಲಹೆಗಾರರು(ಪ್ರಭಾರ) ಸಭೆಯ ಮುಂದೆ ಮಂಡಿಸಿದರು.

| ಕ್ರ. ಸಂ. | ಕಾಮಗಾರಿಗಳ ವಿವರ | ಅಂದಾಜು ಮೊತ್ತ (ಲಕ್ಷಗಳು) |
|---|---|---|
| 01 | Supplying installing, testing & commissioning electronic hooter dual tone type with suitable M.S.CRCA housing & wiring circuit with powder coated finish of approved color | 4.99 |
| 02 | Supplying & installing, testing and commissioning of conventional smoke DETECTOR with suitable base | |
| 03 | Supply ,fixing and commissioning conventional break glass type single action manual pull station having an integrally mounted reports the status to the fire alarm panel | |
| 04 | Supply & installation of 8 zone fore alarm panel | |

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಎನ್.ಎ.ಬಿ.ಹೆಚ್. ಕಾರ್ಯಕ್ರಮವು 350 ರಿಂದ 750 ಹಾಸಿಗೆಗಳ ಬೋಧಕ ಆಸ್ಪತ್ರೆಯ 4ನೇ ಮಹಡಿ ಮತ್ತು 3ನೇ ಮಹಡಿಯ ಕೆಲವು ಆಯ್ದ ಭಾಗಗಳಿಗೆ Fire Alarm Systemನ್ನು ಅಳವಡಿಸುವ ಕಾಮಗಾರಿಯನ್ನು ಕೆ.ಟಿ.ಟಿ.ಪಿ. ನಿಯಮಾನುಸಾರ ರೂ.4.99 ಲಕ್ಷಗಳ ಅಂದಾಜಿನಲ್ಲಿ ದರ ಪಟ್ಟಿ ಮುಖಾಂತರ ಕೈಗೊಂಡು ಸದರಿ ವೆಚ್ಚವನ್ನು ಯೂಸರ್ಸ್ ನಿಧಿಯಿಂದ ಭರಿಸುವುದೆಂದು ಹಾಗೂ

ಅಗ್ನಿ ಶಾಮಕ ಇಲಾಖೆಯ ಮಾನದಂಡಗಳ ಪ್ರಕಾರ ಆಸ್ಪತ್ರೆಯ ಎಲ್ಲಾ ಅಂತಸ್ತುಗಳಿಗೆ ಅಗ್ನಿ ಶಾಮಕ (Fire protection system) ವ್ಯವಸ್ಥೆಯನ್ನು ಅಳವಡಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ-ವಿಭಾಗ ಹಾಸನ ಅಂದಾಜು ಪಟ್ಟಿ ಸಲ್ಲಿಸಿದ್ದ ನಂತರ ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆಯೊಂದಿಗೆ ಅಗತ್ಯ ಅನುದಾನವನ್ನು ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 18 | ಹಿಮ್ಸ್ ಸಂಸ್ಥೆಯ ನೇತ್ರ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ನೀರು ಸೋರಿಕೆಯನ್ನು ಶಾಶ್ವತವಾಗಿ ಸರಿಪಡಿಸಲು JSW Roof sheets ಗಳನ್ನು ಅಳವಡಿಸುವ ಬಗ್ಗೆ. | ಸಂಸ್ಥೆಯ 350 ರಿಂದ 750 ಹಾಸಿಗೆಗಳ ಬೋಧಕ ಆಸ್ಪತ್ರೆಯ ನೇತ್ರ ಶಸ್ತ್ರಚಿಕಿತ್ಸಾ ಕೊಠಡಿಯ ಮೇಲ್ಛಾವಣಿಯಿಂದ ನೀರು ಸೋರಿಕೆಯಾಗುತ್ತಿರುವುದರಿಂದ ಶಸ್ತ್ರಚಿಕಿತ್ಸೆಯನ್ನು ಮಾಡಲು ಅನಾನುಕೂಲವಾಗುತ್ತಿದೆ. ಇದನ್ನು ಶಾಶ್ವತವಾಗಿ ಸರಿಪಡಿಸಲು JSW Roof sheets ಗಳನ್ನು ತುರ್ತಾಗಿ ಅಳವಡಿಸಿ ಕೊಡಬೇಕಾಗಿ ವಿಭಾಗದ ಮುಖ್ಯಸ್ಥರು ಮನವಿ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಸದರಿ ಕಾಮಗಾರಿ ಕೈಗೊಳ್ಳಲು ಅಂದಾಜು ಪಟ್ಟಿ ಸಲ್ಲಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ-ವಿಭಾಗ ಹಾಸನ ರವರಿಗೆ ಪತ್ರ ಬರೆಯಲಾಗಿದ್ದು, ಸದರಿ ಇಲಾಖೆಯವರು ಈ ಕೆಳಕಂಡಂತೆ ಅಂದಾಜು ಪಟ್ಟಿ ಸಲ್ಲಿಸಿರುವುದನ್ನು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು /ಆರ್ಥಿಕ ಸಲಹೆಗಾರರು(ಪ್ರಭಾರ) ಸಭೆಯ ಮುಂದೆ ಮಂಡಿಸಿದರು. |

| ಕ್ರ ಸಂ. | ಕಾಮಗಾರಿಗಳ ವಿವರ | ಅಂದಾಜು ಮೊತ್ತ (ಲಕ್ಷಗಳು) |
|---|---|---|
| **01** | Providing MS trust work for Roof covering sheets | **25.00** |
| **02** | Providing galvalume sheets and ridge sheet covering | |
| **03** | Providing enamel metal paint for truss works | |
| **04** | Providing protective concrete studs | |

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ನೇತ್ರ ಶಸ್ತ್ರಚಿಕಿತ್ಸಾ ಕೊಠಡಿಯ ಸುರಕ್ಷತೆ ಹಿತದೃಷ್ಟಿಯಿಂದ ಸದರಿ ಕಾಮಗಾರಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ-ವಿಭಾಗ, ಹಾಸನ ರವರ ಮುಖಾಂತರ ಕೈಗೊಳ್ಳುವುದೆಂದು ಹಾಗೂ ಸದರಿ ಕಾಮಗಾರಿಯ ನಿರ್ವಹಣೆಯ ವೆಚ್ಚವನ್ನು ಸಂಸ್ಥೆಯ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 19 | ಸಂಸ್ಥೆಯ ಬೋಧಕ ಆಸ್ಪತ್ರೆ, ಹಾಸನ ಇಲ್ಲಿಗೆ ಎನ್.ಎ.ಬಿ.ಹೆಚ್. ಸಲಹೆಗಾರರನ್ನು ಗುತ್ತಿಗೆ | 1) ರಾಜ್ಯದ ಕೆಲವು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಎನ್.ಎ.ಬಿ.ಹೆಚ್ ಸಲಹೆಗಾರರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡು ಎನ್.ಎ.ಬಿ.ಹೆಚ್. ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುತ್ತಿದೆ. ಪ್ರಸ್ತುತ ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ಎನ್.ಎ.ಬಿ.ಹೆಚ್. ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಎಲ್ಲಾ ವ್ಯವಸ್ಥೆಗಳನ್ನು ಕೈಗೊಳ್ಳಲಾಗುತ್ತಿದ್ದು ಎನ್.ಎ.ಬಿ.ಹೆಚ್. ಸಲಹೆಗಾರರನ್ನು ನೇಮಕ ಮಾಡಿಕೊಂಡಲ್ಲಿ ಸದರಿಯವರಿಂದ ಸಲಹೆ ಹಾಗೂ |



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಕ್ರಮ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td>ಆಧಾರದಲ್ಲಿ ನೇಮಿಸುವ ಬಗ್ಗೆ ಹಾಗೂ ಎನ್.ಎ.ಬಿ.ಎಲ್. ಮಾನ್ಯತೆ ಸಂಬಂಧ ಬೋಧಕ ಸಿಬ್ಬಂದಿ ವರ್ಗದವರೆಗೆ ತರಬೇತಿಗೆ ನಿಯೋಜನೆ ಮಾಡುವ ಬಗ್ಗೆ.</td><td>ಮಾರ್ಗದರ್ಶನಗಳನ್ನು ಪಡೆದು ಎನ್.ಎ.ಬಿ.ಹೆಚ್. ಕೆಲಸವನ್ನು ಸರಾಗವಾಗಿ ನಡೆಸಿಕೊಂಡು ಹೋಗಬಹುದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಹಿಮ್ಸ್ ಸಂಸ್ಥೆಗೆ ಒಬ್ಬ ಎನ್.ಎ.ಬಿ.ಹೆಚ್. ಸಲಹೆಗಾರರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿ ಕೊಡುವಂತೆ ಎನ್.ಎ.ಬಿ.ಹೆಚ್.ನ ಸಂಯೋಜಕರು ಮನವಿಯನ್ನು ಸಲ್ಲಿಸಿದ್ದು, ಸದರಿ ಹುದ್ದೆಗೆ ಅವಶ್ಯವಿರುವ ವಿದ್ಯಾರ್ಹತೆ ಮತ್ತು ವೇತನದ ಬಗ್ಗೆ ಹಾಗೂ ಎನ್.ಎ.ಬಿ.ಎಲ್ ಮಾನ್ಯತೆ ಸಂಬಂಧಿಸಿದಂತೆ ರೋಗ ಲಕ್ಷಣ ಶಾಸ್ತ್ರ ವಿಭಾಗ, ಮಿಣಿ ಜೀವ ಶಾಸ್ತ್ರ ವಿಭಾಗ, ಜೀವರಸಾಯನ ಶಾಸ್ತ್ರ ವಿಭಾಗ ಒಳಗೊಂಡಂತೆ ವಿಭಾಗಕ್ಕೆ ಇಬ್ಬರಂತೆ 06 ಬೋಧಕ ಸಿಬ್ಬಂದಿಗಳನ್ನು ತರಬೇತಿಗೆ ನಿಯೋಜನೆ ಮಾಡಬೇಕಾಗಿದ್ದು ತರಬೇತಿ ಶುಲ್ಕ ಒಬ್ಬರಿಗೆ ರೂ.12,591.00 ಗಳಂತೆ 06 ಬೋಧಕ ಸಿಬ್ಬಂದಿಗಳಿಗೆ ರೂ.75,546.00ಗಳನ್ನು ತರಬೇತಿ ಶುಲ್ಕವನ್ನಾಗಿ ಪಾವತಿಸಲು ಅನುಮೋದನೆ ನೀಡುವಂತೆ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು /ಆರ್ಥಿಕ ಸಲಹೆಗಾರರು(ಪ್ರಭಾರ) ಸಭೆಯ ಮುಂದೆ ಮಂಡಿಸಿದರು.
<table>
<tr><th>Sl. NO.</th><th>Name of the Post</th><th>No. of Post</th><th>Qualification</th><th>Salary</th></tr>
<tr><td>1</td><td>National Quality Assurance Standard NABh consultant</td><td>01</td><td>MHA with 5 years of experience inNABH entry level accreditation</td><td>30,000/-</td></tr>
</table>
<u>ತೀರ್ಮಾನ:</u><br>
ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಎನ್.ಎ.ಬಿ.ಹೆಚ್. ಸಲಹೆಗಾರರನ್ನು ಮೇಲ್ಕಂಡ ವಿದ್ಯಾರ್ಹತೆ ಹಾಗೂ ವೇತನಕ್ಕೆ ಅನುಗುಣವಾಗಿ ಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುವುದೆಂದು ಹಾಗೂ ಎನ್.ಎ.ಬಿ.ಎಲ್. ತರಬೇತಿಗೆ 2 ಬ್ಯಾಚ್‌ಗಳಲ್ಲಿ (3 ಜನರಂತೆ) ನಿಯೋಜನೆ ಮಾಡಲು ಮತ್ತು ತರಬೇತಿ ವೆಚ್ಚ ರೂ.75,546.00ಗಳನ್ನು ಸಂಸ್ಥೆಯಿಂದ ಪಾವತಿಸುವುದೆಂದು ತೀರ್ಮಾನಿಸಲಾಯಿತು.</td></tr>
<tr><td>20</td><td>ರೇಡಿಯಾಲಜಿ ವಿಭಾಗಕ್ಕೆ ಟೆಲಿ ರೇಡಿಯಾಲಜಿ ಸೌಲಭ್ಯವನ್ನು ಒದಗಿಸುವ ಬಗ್ಗೆ.</td><td>ಹಿಮ್ಸ್ ಸಂಸ್ಥೆಯ ರೇಡಿಯಾಲಜಿ ವಿಭಾಗದಲ್ಲಿ ಸಿ.ಟಿ.ಸ್ಕ್ಯಾನ್, ಎಮ್.ಆರ್.ಐ. ಹಾಗೂ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಪರೀಕ್ಷೆಗಳನ್ನು ಮಾಡಲಾಗುತ್ತಿದ್ದು, 03 ರೇಡಿಯಾಲಜಿ ತಜ್ಞರು ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ವಿಭಾಗಕ್ಕೆ ಬರುವ ರೋಗಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿರುವುದರಿಂದ ನಿಗದಿತ ಸಮಯದಲ್ಲಿ ರೋಗಿಗಳ ಪರೀಕ್ಷಾ ರಿಪೋರ್ಟ್‌ಗಳನ್ನು ನೀಡಲು ಸಾಧ್ಯವಾಗುತ್ತಿರುವುದಿಲ್ಲ. ಆದುದರಿಂದ ರೋಗಿಗಳ ಹಿತದೃಷ್ಟಿಯಿಂದ ಟೆಲಿ ರೇಡಿಯಾಲಜಿ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ವಿಭಾಗದ ಮುಖ್ಯಸ್ಥರು ಮನವಿ ಸಲ್ಲಿಸಿದ್ದು, ಮನವಿ ಸಲ್ಲಿಸಿದ್ದರ ಮೇರೆಗೆ ಸಂಸ್ಥೆಯ 13ನೇ ಆರೋಗ್ಯ ರಕ್ಷಾ ಸಮಿತಿ ಸಭೆಯಲ್ಲಿ ಸದರಿ ವಿಷಯದ ಬಗ್ಗೆ ಚರ್ಚಿಸಿ ರೋಗಿಗಳ ಹಿತದೃಷ್ಟಿಯಿಂದ ಸ್ಕ್ಯಾನಿಂಗ್</td></tr>
</table>



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ರಿಪೋರ್ಟ್‌ಗಳನ್ನು ಖಾಸಗಿ ಸಂಸ್ಥೆಗಳಿಂದ ದರಪಟ್ಟಿ ಪಡೆದು ದರ ನಿಷ್ಕರ್ಷೆ ಮೂಲಕ ಕ್ರಮವಹಿಸುವಂತೆ ತೀರ್ಮಾನಿಸಲಾಗಿದ್ದು, ಅದರಂತೆ 3 ಖಾಸಗಿ ಸಂಸ್ಥೆಯವರು ದರಪಟ್ಟಿ ಸಲ್ಲಿಸಿರುವುದನ್ನು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು / ಆರ್ಥಿಕ ಸಲಹೆಗಾರರು(ಪ್ರಭಾರ) ಸಭೆಯ ಮುಂದೆ ಮಂಡಿಸಿದರು. |

| Sl. No. | MODALITY | REPORTING RATES | | |
|---|---|---|---|---|
| | | STATIM HEALTHCARE | KRISHNA DIAGNOSTICS PVT LTD | 5C NETWORK (India) PVT LTD |
| 1 | CT HEAD / ORBIT/ PNS | 210 | 500 | 210 |
| 2 | CT NECK | 235 | 500 | 240 |
| 3 | CT TEMPORAL BONE | 220 | 500 | 240 |
| 4 | CT MAXILLO FACIAL | 210 | 500 | 210 |
| 5 | CT CHEST | 240 | 500 | 240 |
| 6 | CT ABDOMEN | 250 | 500 | 300 |
| 7 | CT KUB | 210 | 500 | 210 |
| 8 | CT SPINE (CERVICAL THORACIC LUMBAR) | 240 | 500 | 240 |
| 9 | CT EXTREMITY / JOINTS | 240 | 500 | 240 |
| 10 | MRI BRAIN | 300 | 500 | 300 |
| 11 | MRI NECK | 300 | 500 | 300 |
| 12 | MRI ABDOMEN | 300 | 500 | 300 |
| 13 | MRI PELVIS | 300 | 500 | 300 |
| 14 | MRI JOINTS/ EXTREMITY | 300 | 500 | 300 |
| 15 | MRI SPINE (CERVICAL THORACIC LUMBAR) | 300 | 500 | 300 |
| 16 | MRI+MRA/MRV/MRS | 460 | NA | NA |
| 17 | MRI+MRA+MRV/MRS | 550 | NA | NA |



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|

| | | | | |
|---|---|---|---|---|
| 18 | MRI SCREENING | 80 | 500 | 100 |
| 19 | X-RAY | 30 | 100 | 30 |
| 20 | SPECIAL NVESTIGATION X RAYS | 100 | 100 | 100 |
| 21 | MAMMOGRAM | 100 | NA | 100 |

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಂಸ್ಥೆಯ ರೇಡಿಯಾಲಜಿ ವಿಭಾಗದಲ್ಲಿ ರೇಡಿಯಾಲಜಿ ತಜ್ಞರ ಕೊರತೆ ಇರುವುದರಿಂದ ಸದರಿ ಹುದ್ದೆಗಳು ಭರ್ತಿಯಾಗುವವರೆಗೂ ತಾತ್ಕಾಲಿಕವಾಗಿ ಕಡಿಮೆ ದರ ನಿಗದಿಪಡಿಸುವ ಸಂಸ್ಥೆಯಿಂದ ಟೆಲಿ–ರೇಡಿಯಾಲಜಿ ಮೂಲಕ ಸ್ಕ್ಯಾನಿಂಗ್ ರಿಪೋರ್ಟ್‌ಗಳನ್ನು ಪಡೆಯಬಹುದೆಂದು ತೀರ್ಮಾನಿಸಲಾಯಿತು ದರ ಪಟ್ಟಿ ನೀಡಿರುವ ಸಂಸ್ಥೆಗಳು ಕೆಲವೊಂದು ರಿಪೋರ್ಟ್‌ಗಳಿಗೆ ಒಂದೇ ದರವನ್ನು ನಿಗದಿಪಡಿಸಿರುವುದರಿಂದ ಗುಣಮಟ್ಟಕ್ಕೆ ಅನುಗುಣವಾಗಿ ಯಾವ ಸಂಸ್ಥೆಯಿಂದ ಟೆಲಿ–ರೇಡಿಯಾಲಜಿ ಸೌಲಭ್ಯ ಪಡೆಯಬೇಕೆಂಬುದರ ಬಗ್ಗೆ ಇನ್ನು ಹೆಚ್ಚಿನ ಸ್ಪಷ್ಟನೆ ಅವಕಾಶವಿದ್ದು, ಕೆ.ಟಿ.ಪಿ.ಪಿ ನಿಯಮಾನುಸಾರ ಅಲ್ಪಾವಧಿ ಟೆಂಡರ್ ಮೂಲಕ ಮತ್ತೊಮ್ಮೆ ದರ ನಿಗದಿಪಡಿಸಿಕೊಂಡು ನಂತರ ಏಕ ಕಡತದಲ್ಲಿ ಸರ್ಕಾರದಿಂದ ಅನುಮೋದನೆ ಪಡೆಯುವುದೆಂದು ತೀರ್ಮಾನಿಸಲಾಯಿತು. ಹಾಗೂ ಸದರಿ ವೆಚ್ಚವನ್ನು ಬೋಧಕ ಆಸ್ಪತ್ರೆಯ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ನಿರ್ಣಯ ಕೈಗೊಳ್ಳಲಾಯಿತು.

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 21 | ಸಂಸ್ಥೆಯ ಆವರಣದಲ್ಲಿ ಜೈವಿಕ ಇಂಧನ ಘಟಕವನ್ನು ಪ್ರಾರಂಭಿಸುವ ಬಗ್ಗೆ. | ವಿಷಯವನ್ನು ಮುಂದೂಡಲಾಯಿತು. |
| 22 | ಈ ಸಂಸ್ಥೆಯಲ್ಲಿ ಕರ್ತವ್ಯ ನಿರತ ಪೌಷ್ಠಿಕ ಪುನರ್ ವಸತಿ ಘಟಕದ ಗುತ್ತಿಗೆ ಆಧಾರಿತ ಶುಶ್ರೂಷಕರಿಗೆ ಸರ್ಕಾರಿ ಆದೇಶ ಸಂಖ್ಯೆ: ಆಕುಕ 224 ಎಂಎಂಇ | ರಾಜ್ಯದ ಎಲ್ಲಾ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಮಹಾವಿದ್ಯಾಲಯದ ವ್ಯಾಪ್ತಿಯಲ್ಲಿರುವ ಆಸ್ಪತ್ರೆಗಳಲ್ಲಿನ ಶಿಶು ವೈದ್ಯ ಶಾಸ್ತ್ರ ವಿಭಾಗದಲ್ಲಿ ಪೌಷ್ಠಿಕ ಪುನರ್ ವಸತಿ ಕೇಂದ್ರ ಸ್ಥಾಪನೆ ಮಾಡಲು ಅಗತ್ಯವಿರುವ ಸಿಬ್ಬಂದಿ ನೇಮಕ ಮಾಡಿಕೊಳ್ಳುವಂತೆ ಹಾಗೂ ಸಂಬಂಧಿಸಿದ ಸಿಬ್ಬಂದಿಗಳಿಗೆ ಮಾಸಿಕ ಸಂಚಿತ ವೇತನ ನೀಡುವಂತೆ ಸರ್ಕಾರದ ಪತ್ರ ಸಂಖ್ಯೆ: ಆಕುಕ 126ಆರ್‌ಜಿಯು 2012(ಭಾಗ), ಬೆಂಗಳೂರು, ದಿನಾಂಕ: 25.09.2012. ರ ಆದೇಶದನ್ವಯ ಪೌಷ್ಠಿಕ ಪುನರ್ ವಸತಿ ಘಟಕಕ್ಕೆ ಶ್ರೀಮತಿ ನೀಲಮ್ಮ.ಕೆ.ವಿ. ಮತ್ತು ಶೀಮತಿ ಪ್ಲಾವೀಯ ನಕ್ಷತ್ರ ಮೇರಿ (02) ಜನ ಶುಶ್ರೂಷಕರನ್ನು ಮಾಸಿಕ ಸಂಚಿತ ವೇತನದಡಿ ನೇಮಕ ಮಾಡಿಕೊಂಡು ಸರ್ಕಾರದ ನಿರ್ದೇಶನದಂತೆ ರೂ.13,000/–ಗಳನ್ನು ನೀಡಲಾಗುತ್ತಿತ್ತು. ಮೇಲ್ಕಂಡ ಶುಶ್ರೂಷಕರು ದಿನಾಂಕ:17.06.2013 ರಿಂದ (179 ದಿನಗಳಿಗೆ) ನೇಮಕಗೊಂಡು ಸದರಿ ಘಟಕಕ್ಕೆ ಇವರ |



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ದಿನಾಂಕ: 26-02-2019ರನ್ವಯ ವೇತನವನ್ನು ಪುನರ್ ನಿಗದಿಗೊಳಿಸಲು ಅನುಮೋದನೆ ಕೋರಿಕೆ ಕುರಿತು. | ಸೇವೆಯು ಅತ್ಯಗತ್ಯವಿರುವ ಮೇರೆಗೆ 6 ತಿಂಗಳಿಗಳಿಗೊಮ್ಮೆ ಇವರುಗಳ ಸೇವೆಯನ್ನು ನವೀಕರಿಸಲ್ಪಟ್ಟು, ಕಳೆದ 7 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ.<br>ಮುಂದುವರೆದು ಸರ್ಕಾರದ ಆದೇಶ ಸಂಖ್ಯೆ: ಆಕುಕ 224 ಎಂಎಂಇ 2018. ಬೆಂಗಳೂರು, ದಿನಾಂಕ:26-02-2019.ರ ಆದೇಶದಲ್ಲಿ 26.02.2019 ರಿಂದ ಜಾರಿಗೆ ಬರುವಂತೆ ಸರ್ಕಾರದ ಮುಂದಿನ ಆದೇಶದವರೆಗೆ ಆಯಾ ಹುದ್ದೆಯ 2018ರ 6ನೇ ಪರಿಷ್ಕೃತ ವೇತನ ಶ್ರೇಣಿ ರೂ-33450-850-36000-950-39800-1100-46400-1250-53900-1450-62600. (ಯಾವುದೇ ಇತರೆ ಭತ್ಯೆಗಳಿಗೆ ಅವಕಾಶವಿಲ್ಲದಂತೆ) ವೇತನ ನಿಗದಿಗೊಳಿಸಿ ಆದೇಶವಾಗಿರುತ್ತದೆ, ಸದರಿ ಶುಶ್ರೂಷಕರು ಜೀವನ ನಿರ್ವಹಣೆ ಕಷ್ಟಕರವಾಗಿರುತ್ತದೆಂದು ಉಲ್ಲೇಖದಂತೆ ಮನವಿ ಸಲ್ಲಿಸಿ ವಾಣಿವಿಲಾಸ, ಬೋರಿಗ್ ಆಸ್ಪತ್ರೆ, ಬೆಂಗಳೂರು. ಮತ್ತು ಶಿವಮೊಗ್ಗ ವೈದ್ಯಕೀಯ ಕಾಲೇಜುಗಳಲ್ಲಿ ಸದರಿಯವರ ಸಹದ್ಯೋಗಿಗಳು ಕೆಲಸ ನಿರ್ವಹಿಸುತ್ತಿದ್ದು, 6ನೇ ಪರಿಷ್ಕೃತ ವೇತನ (33450-100) 100 ಕಡಿತಗೊಳಿಸಿ ರೂ.33350 ನ್ನು ಪಡೆಯುತ್ತಿರುವುದಾಗಿ ತಿಳಿಸಿ ಇವರು ಸಹ ಪರಿಷ್ಕೃತ ವೇತನ ಮಂಜೂರು ಮಾಡಲು ಕೋರಿರುತ್ತಾರೆ. ಆದ್ದರಿಂದ ಪ್ರಸ್ತುತ ಈ ಸಂಸ್ಥೆಯಲ್ಲಿ ಕರ್ತವ್ಯ ನಿರತ ಇಬ್ಬರು ಶುಶ್ರೂಷಕರು (ಗುತ್ತಿಗೆ ಆಧಾರ) ಇವರುಗಳಿಗೆ ಮೇಲ್ಕಂಡ ಸರ್ಕಾರಿ ಆದೇಶದಂತೆ ದಿನಾಂಕ: 26.02.2019 ರನ್ವಯ ಶುಶ್ರೂಷಕರ ಹುದ್ದೆಯ(Recruitment Scale) ನಲ್ಲಿನ 2018ರ ಪರಿಷ್ಕೃತ ವೇತನ ಶ್ರೇಣಿ ರೂ(33450-62600) ರಲ್ಲಿನ ಸಂವಾದಿ ಕನಿಷ್ಠ ವೇತನ ಹಂತ (ಯಾವುದೇ ಇತರೆ ಹುದ್ದೆಗಳಿಗೆ ಅವಕಾಶವಿಲ್ಲದಂತೆ) ರೂ-33450/-ಗಳನ್ನು ನಿಗದಿಗೊಳಿಸಲು ಅನುಮೋದನೆಗಾಗಿ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು /ಆರ್ಥಿಕ ಸಲಹೆಗಾರರು(ಪ್ರಭಾರ) ಸಭೆಯ ಮುಂದೆ ಮಂಡಿಸಿದರು.<br>**ತೀರ್ಮಾನ:**<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸರ್ಕಾರಿ ಆದೇಶದಂತೆ ದಿನಾಂಕ: 26.02.2019 ರನ್ವಯ ಶುಶ್ರೂಷಕರ ಹುದ್ದೆಯ(Recruitment Scale) ನಲ್ಲಿನ 2018ರ ಪರಿಷ್ಕೃತ ವೇತನ ಶ್ರೇಣಿ ರೂ(33,450-62,600) ರಲ್ಲಿನ ಸಂವಾದಿ ಕನಿಷ್ಠ ವೇತನ ಹಂತ ರೂ.33450/-ಗಳನ್ನು ನಿಗದಿಗೊಳಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |



ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಕ್ರಮ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td>23</td><td>ಸಂಸ್ಥೆಯ ವಿವಿಧ ವಿಭಾಗಗಳಿಗೆ ಅಗತ್ಯವಿರುವ ಸ್ಟೂಡೆಂಟ್ಸ್ ಚೇರ್‌ಗಳನ್ನು ಕೆ.ಟಿ.ಪಿ.ಪಿ. ನಿಯಮಾನುಸಾರ ಇ–ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ.</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಸಂಸ್ಥೆಯ ಪ್ರವೇಶ ಮಿತಿಯನ್ನು 100 ರಿಂದ 150ಕ್ಕೆ ಹೆಚ್ಚಿಸಲಾಗಿದ್ದು, ಮತ್ತು ಸ್ನಾತಕೋತ್ತರ ಪದವಿ ಪ್ರಾರಂಭಿಸಲಾಗಿದ್ದು, ವಿವಿಧ ವಿಭಾಗಗಳಿಗೆ ಸ್ಟೂಡೆಂಟ್ಸ್ ಚೇರ್‌ಗಳ ಅಗತ್ಯವಿದ್ದು, ವಿಭಾಗಗಳಿಗೆ ಅಗತ್ಯವಿರುವ ಸ್ಟೂಡೆಂಟ್ಸ್ ಚೇರ್‌ಗಳನ್ನು ಒದಗಿಸಲು ವಿಭಾಗಗಳ ಮುಖ್ಯಸ್ಥರು ಮನವಿ ಸಲ್ಲಿಸಿರುತ್ತಾರೆ. ಸದರಿ ಸ್ಟೂಡೆಂಟ್ಸ್ ಚೇರ್‌ಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಟೆಂಡರ್ ಮೂಲಕ ಸರಬರಾಜು ಪಡೆಯಲು ಮತ್ತು ಈ ವೆಚ್ಚವನ್ನು ಯೂನಿವರ್ಸಿಟಿ ಖಾತೆಯಲ್ಲಿ ಲಭ್ಯವಿರುವ ಅನುದಾನದಿಂದ ಪಾವತಿಸುವ ವಿಷಯವನ್ನು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು /ಆರ್ಥಿಕ ಸಲಹೆಗಾರರು(ಪ್ರಭಾರ) ಸಭೆಯ ಮುಂದೆ ಮಂಡಿಸಿದರು.
<table>
<tr><th>Sl No</th><th>Details</th><th>Qty</th><th>Rate</th><th>Amount</th></tr>
<tr><td>01</td><td>Students Chairs</td><td>300</td><td>2,000/-</td><td>6,00,000/-</td></tr>
<tr><td></td><td>Total</td><td></td><td></td><td>6,00,000/-</td></tr>
</table>
<u>ತೀರ್ಮಾನ:</u><br>
ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ವಿದ್ಯಾರ್ಥಿಗಳ ಪ್ರವೇಶ ಮಿತಿ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಕೊರತೆ ಇರುವ Students Chairs ಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಟೆಂಡರ್ ಮುಖಾಂತರ ಖರೀದಿಸುವುದೆಂದು ಮತ್ತು ಸದರಿ ವೆಚ್ಚವನ್ನು ಯೂನಿವರ್ಸಿಟಿ ಖಾತೆಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.<br>
‘ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು’</td></tr>
</table>

ಮುಖ್ಯ ಆಡಳಿತಾಧಿಕಾರಿಗಳು/ಆರ್ಥಿಕ ಸಲಹೆಗಾರರು (ಪ್ರಭಾರ)
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ,
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

ಮುಖ್ಯ ಆಡಳಿತಾಧಿಕಾರಿಗಳು
ಹಿಮ್ಸ್, ಹಾಸನ.

ನಿರ್ದೇಶಕರು ಹಾಗೂ ಡೀನ್,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
ಹಾಗೂ ಸದಸ್ಯರು, ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬಹುಮಹಡಿಗಳ ಕಟ್ಟಡ,
ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.